ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

EMAIL : dairyadadaari@gmail.com ಸಂಪುಟ: 01 ಸಂಚಿಕೆ: 268

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795 ಭಾನುವಾರ: 04-10-2026

# ನದಿ ಪಕ್ಕದ ಊರಿಗೆ ನೀರಿಲ್ಲವೆಂದರೆ ನಂಬುತ್ತೀರಾ? ನಂಬಲೇಬೇಕು – ಇದು ಮಾನ್ವಿ!

ಧೈರ್ಯದ ದಾರಿ

ಮಾನ್ವಿ ಪಟ್ಟಣದ ಜನರಿಗೆ ನೀರು ಎಂಬುದು ಇಂದಿಗೂ ಒಂದು ಕನಸಾಗಿಯೇ ಉಳಿದಿದೆ. ನೋಡಲು ಹೋದರೆ, ತುಂಗಭದ್ರಾ ನದಿಯು ಮಾನ್ವಿಗೆ ಅತ್ಯಂತ ಸಮೀಪದಲ್ಲಿದೆ. ಆದರೆ ವಿಪರ್ಯಾಸವೆಂದರೆ, ನದಿ ಪಕ್ಕದಲ್ಲಿದ್ದರೂ ಕಳೆದ 25 ವರ್ಷಗಳಿಂದ ಮಾನ್ವಿಯ ಜನರು ಹನಿ ನೀರಿಗಾಗಿ ಪರದಾಡುತ್ತಿದ್ದಾರೆ.

ನಾನು ಕಂಡಂತೆ, ಕಳೆದ 25 ವರ್ಷಗಳಲ್ಲಿ ಯಾವುದೇ ರಾಜಕೀಯ ಪಕ್ಷವಾಗಲಿ, ಆಡಳಿತ ಪಕ್ಷವಾಗಲಿ ಅಥವಾ ವಿರೋಧ ಪಕ್ಷವಾಗಲಿ, ಮಾನ್ವಿಯ ನೀರಿನ ಸಮಸ್ಯೆಯನ್ನು ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ. ಅವರೆಲ್ಲರಿಗೂ ತಮ್ಮ ತಮ್ಮ ಸ್ವಾರ್ಥ ಮತ್ತು ರಾಜಕೀಯ ಹಗ್ಗ–ಜಗ್ಗಾಟವೇ ಮುಖ್ಯವಾಗಿದೆ, ಜನರ ಅಭಿವೃದ್ಧಿಯ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ.

## ಕೋಟ್ಯಾಂತರ ರೂಪಾಯಿ ಯೋಜನೆಗಳು ಕಾಗದ ಮೇಲೆ ಮಾತ್ರ:

ಜನರ ಕಣ್ಣೊರೆಸಲು ಕಳೆದ ಒಂದೆರಡು ವರ್ಷಗಳ ಹಿಂದೆ ಸರ್ಕಾರವು ಕೋಟ್ಯಾಂತರ ರೂಪಾಯಿ ವೆಚ್ಚ ಮಾಡಿ ಒಂದು ದೊಡ್ಡ ಕೆರೆಯನ್ನು ಕಟ್ಟಿಸಿತು. ಅದರ ಜೊತೆಗೆ, ಜುಮ್ಮಲ್ ದೊಡ್ಡಿ ಎಂಬಲ್ಲಿ ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ಬೃಹತ್ ನೀರಿನ ಟ್ಯಾಂಕ್ ಒಂದನ್ನು ನಿರ್ಮಾಣ ಮಾಡಲಾಗಿದೆ. ಆದರೆ ದುರದೃಷ್ಟವಶಾತ್, ಈ ಎರಡೂ ಯೋಜನೆಗಳಿಂದ ಮಾನ್ವಿಯ ಜನಸಾಮಾನ್ಯರಿಗೆ ಒಂದು ಪೈಸೆಯಷ್ಟು ಪ್ರಯೋಜನವಾಗಿಲ್ಲ.

ನಿರ್ಮಿಸಲಾದ ಟ್ಯಾಂಕ್ ಇಂದಿಗೂ ಹಾಗೆಯೇ ನಿರುಪಯುಕ್ತವಾಗಿ ಬಿದ್ದಿದೆ. ಪೈಪ್‌ಲೈನ್ ಸಂಪರ್ಕವಿಲ್ಲ, ನೀರು ಸಂಗ್ರಹವಿಲ್ಲ, ವಿತರಣೆಯೂ ಇಲ್ಲ.

## ವಾರ್ಡ್‌ಗಳಲ್ಲಿ ಒಂದು ವಾರವಾದರೂ ನೀರಿಲ್ಲ:

ಮಾನ್ವಿ ಪುರಸಭೆಯ ವ್ಯಾಪ್ತಿಯ ಯಾವುದೇ ವಾರ್ಡ್‌ಗೆ ಸಮರ್ಪಕವಾಗಿ ನೀರು ಬರುತ್ತಿಲ್ಲ. ಪಟ್ಟಣದ ಬಹುತೇಕ ವಾರ್ಡ್‌ಗಳಲ್ಲಿ ಒಂದು ವಾರ ಕಳೆದರೂ ಒಂದು ಬಾರಿಯೂ ನಳ್ಳಿ ನೀರು ಬಂದಿಲ್ಲ. ಮಹಿಳೆಯರು ಬೆಳಗ್ಗೆ 4 ಗಂಟೆಯಿಂದ ಕೊಡ ಹಿಡಿದು ನಿಲ್ಲುವ ಪರಿಸ್ಥಿತಿ ಇದೆ. ಬಡವರು ದುಬಾರಿ ಹಣ ಕೊಟ್ಟು ಟ್ಯಾಂಕರ್ ನೀರು ಖರೀದಿಸುವಂತಾಗಿದೆ.

## ಶಾಸಕರು, ಜನಪ್ರತಿನಿದಿನಗಳು, ಅಧಿಕಾರಿಗಳು ಕಣ್ಣಿದ್ದು ಕುರುಡರಾಗಿದ್ದಾರೆ.



ಮಾನ್ವಿ ಪಟ್ಟಣ 25 ವರ್ಷಗಳಿಂದ ಕುಡಿಯುವ ನೀರಿನ ಅಭಾವ ಎದುರಿಸುತ್ತಿದ್ದು, ಇಲ್ಲಿನ ಶಾಸಕರು, ಜನಪ್ರತಿನಿದಿನಗಳು, ಅಧಿಕಾರಿಗಳು ಕಣ್ಣಿದ್ದು ಕುರುಡರಾಗಿದ್ದಾರೆ. ಸುಮಾರು 80 ಕೋಟಿ ಖರ್ಚು ಮಾಡಿ 25 ವರ್ಷಗಳಲ್ಲಿ ರಬ್ಬಣಕಲ್ ಕೆರೆ ಮಾಡಿ ಕೊಳಚೆ ನೀರು ಸಂಗ್ರಹಿಸಿ ಕೆಲವೇ ವಾರ್ಡ್ಗಳಿಗೆ ತಲುಪಿದೆ,ನಿಜಾಮರ ಕಾಲದ ಪೈಪೈನ್ ಗಳೇ ಇರುವುದರಿಂದ ಹಾಗೂ ವೈಜ್ಞಾನಿಕ ಹಂಚಿಕೆ ಇಲ್ಲದಿರುವುದರಿಂದ ಮಾನ್ವಿ ಜನತೆ ಇಂದಿಗೂ ಕುಡಿಯುವ ನೀರಿನ ಬವಣೆಗೆ ಒಳಗಾಗಿದ್ದಾರೆ.

ಮಾಜಿ ಸಚಿವರು,ಹಾಗೂ ಹಾಲಿ ಶಾಸಕರು, ಅಧಿಕಾರಿಗಳು ಬರೀ ಮೀಟಿಂಗ್ ನ ನೆಪದಲ್ಲಿ ಜನರನ್ನು ಮರಳು ಮಾಡುತ್ತಿದ್ದಾರೆಯೇ ಹೊರತು ಜನರ ಸಮಸ್ಯೆಗಳಿಗೆ ಪರಿಹಾರ ಕೊಡಿಸುವಲ್ಲಿ ವಿಫಲರಾಗಿದ್ದಾರೆ.

**ಕುಮಾರ ಸ್ವಾಮಿ ಮೇದಾ**
ಅಧ್ಯಕ್ಷರು ಮಾನ್ವಿ ಮಂಡಲ ಮಹಾ ಶಕ್ತಿ ಕೇಂದ್ರ ಭಾರತೀಯ ಜನತಾ ಪಾರ್ಟಿ




## ಅಧಿಕಾರಿಗಳ ನಿರ್ಲಕ್ಷ್ಯವೇ ಮುಖ್ಯ ಕಾರಣ



"ಮಾನ್ವಿ ನಗರದಲ್ಲಿ ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿರುವ ಕುಡಿಯುವ ನೀರಿನ ಸಮಸ್ಯೆಯಿಂದ ಸಾರ್ವಜನಿಕರು ಸಾರ್ವಜನಿಕರು ಕಂಗಾಲಾಗಿದ್ದಾರೆ, ಪುರಸಭೆ ಮುಖ್ಯತೆ ಮುಖ್ಯ ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಅಸಮರ್ಥತೆ ಇಂದಿನ ಈ ದುಸ್ಥಿತಿಗೆ ಪ್ರಮುಖ ಕಾರಣವಾಗಿದೆ.

**ಶೇಖ್ ಬಾಬಾ ಹುಸೇನ್ ಗಚ್ಚಿ,**
ತಾಲ್ಲೂಕ ಅಧ್ಯಕ್ಷರು,
ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾ.
ಮಾನ್ವಿ.

## ಸಮಸ್ಯೆಯನ್ನು ಬಗೆಹರಿಸದಿದ್ದರೆ ಧರಣಿ ಮಾಡಲಾಗುವುದು.



"ಮಾನ್ವಿ ನಗರದ ನಮಾಜ್ಗೆರೆ ಗುಡ್ಡ, ಇಸ್ಲಾಮಿ ನಗರ್ ಮತ್ತು ಅಂದ್ರುನ್ ಖಿಲಾ ದಂತಹ ಹಲವು ವಾರ್ಡ್ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗಿದೆ. ಇದಕ್ಕೆ ಪುರಸಭೆ ಅಧಿಕಾರಿಗಳು ನೇರ ನಿರ್ಲಕ್ಷ ಕಾರಣವಾಗಿದೆ. ಮೇಲಧಿಕಾರಿಗಳು ಮುಂದಿನ ಎರಡು ಮೂರು ದಿನದಲ್ಲಿ ಈ ಸಮಸ್ಯೆಯನ್ನು ಬಗೆಹರಿಸದಿದ್ದರೆ ನಮ್ಮ ಪಕ್ಷ AIMIM ದಿಂದ ಪುರಸಭೆ ಎದುರಿಗೆ ಧರಣಿ ಮಾಡಲಾಗುವುದು.

**ನಾಸೀರ್ ಅಲಿ ಖುರೇಷಿ**
ತಾಲೂಕ ಅಧ್ಯಕ್ಷರು (AIMIM ಮಾನ್ವಿ)

## ಕೋನಾಪುರಪೇಟೆ ಜನರ ನೀರಿನ ಸಮಸ್ಯೆಗೆ ಸ್ಪಂದನೆ ಇಲ್ಲ,



"ಕೋನಾಪುರಪೇಟೆ ಜನರ ನೀರಿನ ಸಮಸ್ಯೆಗೆ ಕಿಂಚಿತ್ತು ಸ್ಪಂದನೆ ಇಲ್ಲ, ಇಲ್ಲೇ ಹಾದು ಹೋಗುವ ಮುಖ್ಯ ಪೈಪ್ ಲೈನ್ ಇದ್ದರು, ನಮ್ಮ ವಾರ್ಡಿನ ಜನರಿಗೆ ನೀರಿನ ಸಮಸ್ಯೆ ಎರಡು ದಶಕದಿಂದ ಬಗೆಹರಿದಿಲ್ಲ. ಇದಕ್ಕೆ ಪುರಸಭೆಯ ನಿರ್ಲಕ್ಷವೇ ಕಾರಣ.

**ಪಿ. ರವಿ**
ವಕೀಲರು ಮತ್ತು ಜೆಡಿಎಸ್ ಮುಖಂಡರು, ಮಾನ್ವಿ

## ನೀರಿನ ಸಮಸ್ಯೆ ಕೇಳಲು ಕರೆ ಮಾಡಿದ ಪತ್ರಕರ್ತರಿಗೂ ಸ್ಪಂದಿಸದ ಪುರಸಭೆ ಅಧಿಕಾರಿ!

"ಪುರಸಭೆ ಅಧಿಕಾರಿಗೆ, ನೀರಿನ ಸಮಸ್ಯೆ ಕುರಿತು ತಿಳಿಸಲು ಹಾಗೂ ಈ ವಿಚಾರವಾಗಿ ಅವರ ಅನಿಸಿಕೆಯನ್ನು ತೆಗೆದುಕೊಳ್ಳಲು ಕಾಲ್ ಮಾಡಿದಾಗ ಒಮ್ಮೆಯೂ ಕಾಲ್ ತೆಗೆದುಕೊಳ್ಳುತ್ತಿಲ್ಲ. ಜವಾಬ್ದಾರಿಯುತ ಪತ್ರಕರ್ತರೊಬ್ಬರು ಕಾಲ್ ಮಾಡಿದಾಗ ಕರೆಗೆ ಪ್ರತಿಕ್ರಿಯಿಸದ ಇವರು ಜನಸಾಮಾನ್ಯರಿಗೆ ಪ್ರತಿಸ್ಕರಿಸುತ್ತಾರೆ ಎಂಬ ನಂಬಿಕೆ ಕಂಡು ಬರುತ್ತಿಲ್ಲ.



## ಈ ಎಲ್ಲಾ ಅವ್ಯವಸ್ಥೆಗೆ ಮುಖ್ಯ ಕಾರಣ ಪುರಸಭೆ ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿತನ.

1. ಸಮಯಕ್ಕೆ ಸರಿಯಾಗಿ ನೀರಿನ ಪೈಪ್‌ಗಳನ್ನು ಪರಿಶೀಲನೆ ಮಾಡುವುದಿಲ್ಲ.
2. ಎಲ್ಲೆಲ್ಲಿ ಲೀಕೇಜ್ ಆಗುತ್ತಿದೆ ಎಂದು ನೋಡುವುದಿಲ್ಲ.
3. ಪೈಪ್‌ಗಳು ಒಡೆದು ಸಾವಿರಾರು ಲೀಟರ್ ನೀರು ರಸ್ತೆಯಲ್ಲಿ ವ್ಯರ್ಥವಾಗಿ ಹರಿದು ಹೋಗುತ್ತಿದೆ.
4. ಆದರೆ, ಕಾಮಗಾರಿ ಮಾಡದೆಯೇ ಬೋಗಸ್ ಬಿಲ್‌ಗಳನ್ನು ಸೃಷ್ಟಿಸಿ ಹಣ ಎತ್ತುವಲ್ಲಿ ಮಾತ್ರ ಅಧಿಕಾರಿಗಳು ನಂಬರ್ ಒನ್ ಆಗಿದ್ದಾರೆ.

## ಪ್ರಶ್ನೆ ಹಾಗೆಯೇ ಉಳಿದಿದೆ:

ತುಂಗಭದ್ರಾ ನದಿ ಇದ್ದೂ, ಕೋಟ್ಯಂತರ ರೂಪಾಯಿಯ ಯೋಜನೆಗಳಿದ್ದೂ, ಮಾನ್ವಿಯ ಜನರು ಇನ್ನೂ ಎಷ್ಟು ವರ್ಷಗಳು ನೀರಿಗಾಗಿ ಕಾಯಬೇಕು? ಈ ಪ್ರಶ್ನೆಗೆ ಉತ್ತರ ಕೊಡುವವರು ಯಾರು? ಜಿಲ್ಲಾಧಿಕಾರಿಗಳು ಕೂಡಲೇ ಮಧ್ಯಪ್ರವೇಶಿಸಿ, ಜುಮ್ಮಲ್ ದೊಡ್ಡಿ ಟ್ಯಾಂಕ್ ಮತ್ತು ಕೆರೆ ಯೋಜನೆಯ ಸಂಪೂರ್ಣ ಲೆಕ್ಕಪತ್ರದ ಬಗ್ಗೆ ತನಿಖೆ ನಡೆಸಬೇಕು ಮತ್ತು ಮಾನ್ವಿಯ ಪ್ರತಿಯೊಂದು ವಾರ್ಡ್‌ಗೂ ದಿನಬಿಟ್ಟು ದಿನವಾದರೂ ಕುಡಿಯುವ ನೀರು ಪೂರೈಸುವಂತೆ ಪುರಸಭೆಗೆ ಖಡಕ್ ಆದೇಶ ನೀಡಬೇಕು

–ಮಾನ್ವಿಯ ನಾಗರಿಕರ ಆಗ್ರಹ

## ವಿಫಲವಾದ ಪುರಸಭೆ ಆಡಳಿತ...!



ಖಾಲಿ ಕೊಡ ಹಿಡಿದು ಬಿಸಿಲಿನಲ್ಲಿ ಅಲೆದಾಡುತ್ತಿರುವ ನಗರದ ಜನತೆ!

ಮಾನ್ವಿ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ದಿನದಿಂದ ದಿನಕ್ಕೆ ಗಂಭೀರವಾಗುತ್ತಿದ್ದರೂ, ಪುರಸಭೆ ಆಡಳಿತ ಮಾತ್ರ ಸಮಸ್ಯೆ ಪರಿಹಾರಕ್ಕೆ ಅಗತ್ಯ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿದೆ. ನಗರದ ಓವರ್‌ಹೆಡ್ ಟ್ಯಾಂಕ್ ಕಾಮಗಾರಿ ಸಂಪೂರ್ಣ ನಿರ್ಲಕ್ಷ್ಯಕ್ಕೆ ಒಳಗಾಗಿದ್ದು, ಶಾಶ್ವತ ಕುಡಿಯುವ ನೀರಿನ ಯೋಜನೆ ಹಳ್ಳ ಹಿಡಿದಂತಾಗಿದೆ.

ಪರಿಣಾಮವಾಗಿ, ಬಿಸಿಲನ್ನೂ ಲೆಕ್ಕಿಸದೆ ಮಹಿಳೆಯರು, ವೃದ್ಧರು ಹಾಗೂ ಸಾರ್ವಜನಿಕರು ಖಾಲಿ ಕೊಡಗಳನ್ನು ಹಿಡಿದು ನೀರಿಗಾಗಿ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಜನರ ಮೂಲಭೂತ ಅಗತ್ಯವಾದ ಕುಡಿಯುವ ನೀರಿಗೂ ತಾರತಮ್ಯ ಮತ್ತು ನಿರ್ಲಕ್ಷ್ಯ ಏಕೆ?

ಸಭೆಗಳಿಗೆ ಮಾತ್ರ ಸೀಮಿತವಾಗದೆ, ಜನರ ಸಮಸ್ಯೆಗಳಿಗೆ ಸ್ಪಂದಿಸಿ ಓವರ್‌ಹೆಡ್ ಟ್ಯಾಂಕ್ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ, ಪ್ರತಿಯೊಂದು ವಾರ್ಡ್‌ಗೂ ಸಮರ್ಪಕ ಕುಡಿಯುವ ನೀರು ಪೂರೈಸಬೇಕು. ಇಲ್ಲವಾದರೆ, ಕುಡಿಯುವ ನೀರಿಗಾಗಿ ಪರದಾಡುತ್ತಿರುವ ಜನರ ಅಸಮಾಧಾನ ತೀವ್ರ ಸ್ವರೂಪ ಪಡೆಯುವ ಮುನ್ನವೇ ಪುರಸಭೆ ಆಡಳಿತ ಎಚ್ಚೆತ್ತುಕೊಳ್ಳಬೇಕು.

**ಶ್ರೀಕಾಂತ ಪಾಟೀಲ ಗೂಳಿ**
ರಾಜ್ಯಾಧ್ಯಕ್ಷರು
ಕರವೇ ಜನಪರ ಬಣ

## ಕೇಂದ್ರ ತಂಡದಿಂದ ಬರ ವೀಕ್ಷಣೆ



**ಬೆಂಗಳೂರು, ಅ. 3–** ರಾಜ್ಯದ ಬರ ಅಧ್ಯಯನಕ್ಕೆ ಆಗಮಿಸಿರುವ ಕೇಂದ್ರ ತಂಡ ರಾಜ್ಯದ ಬರ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಬರ ಪರಿಸ್ಥಿತಿಯ ವೀಕ್ಷಣೆ ನಡೆಸಿದೆ.

ಕೇಂದ್ರದ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದ ಜಂಟಿ ಕಾರ್ಯದರ್ಶಿ ಅಜಿತ್‌ಕುಮಾರ್ ಸಾಹು ನೇತೃತ್ವದಲ್ಲಿ ಮೂರು ತಂಡಗಳು ರಾಜ್ಯದ ಬರ ಅಧ್ಯಯನಕ್ಕೆ ಆಗಮಿಸಿದ್ದು, ಈ ಮೂರು ತಂಡಗಳು ರಾಜ್ಯದ ವಿವಿಧೆಡೆ ಬರ ಪೀಡಿತ ಸ್ಥಳಗಳಿಗೆ ತೆರಳಿ ಬರ ಪರಿಸ್ಥಿತಿಯನ್ನು ಖುದ್ದು ಅವಲೋಕಿಸಿದರು.

ಇಂದು ಮತ್ತು ನಾಳೆ ಎರಡು ದಿನ ಕೇಂದ್ರದ ಈ ಮೂರು ತಂಡಗಳು ವಿವಿಧ ಜಿಲ್ಲೆಗಳಿಗೆ ತೆರಳಿ ಬರದಿಂದ ಆಗಿರುವ ಬೆಳೆ ಹಾನಿ, ಜಾನುವಾರುಗಳಿಗೆ ಮೇವಿನ ಕೊರತೆ, ಕುಡಿಯುವ ನೀರಿನ ಸಂಕಷ್ಟ ಎಲ್ಲವನ್ನು ಅವಲೋಕಿಸಲಿದೆ. ಜತೆಗೆ ಬರದಿಂದ ತೊಂದರೆಗೆ ಒಳಗಾಗಿರುವ ರೈತರ ಸಂಕಷ್ಟವನ್ನು ಆಲಿಸಲಿದೆ.

ರಾಜ್ಯದಲ್ಲಿ ಭೀಕರ ಬರ ಪರಿಸ್ಥಿತಿ ಇದೆ. ಬರ ಅಧ್ಯಯನಕ್ಕೆ ಕೇಂದ್ರ ತಂಡವನ್ನು 2ನೇಪುಟಕ್ಕೆ

**ಮೊದಲನೇ ಪುಟದಿಂದ**

# ಕೇಂದ್ರ ತಂಡದಿಂದ ಬರ ವೀಕ್ಷಣೆ

ಕಳುಹಿಸುವಂತೆ ರಾಜ್ಯ ಸರ್ಕಾರ ಕೇಂದ್ರ ಕೃಷಿ ಸಚಿವರಿಗೆ ಮನವಿ ಮಾಡಿತ್ತು. ಅದರಂತೆ ಕೇಂದ್ರದ ಮೂರು ತಂಡಗಳು ಇಂದು ರಾಜ್ಯಕ್ಕೆ ಬಂದಿಳಿದಿದ್ದು, ಬರ ಪರಿಸ್ಥಿತಿಯನ್ನು ಕಣ್ಣಾರೆ ಕಂಡು ಕೇಂದ್ರಕ್ಕೆ ವಸ್ತುಸ್ಥಿತಿಯ ವರದಿಯನ್ನು ಸಲ್ಲಿಸಲಿವೆ.
ಬರ ಅಧ್ಯಯನ ತಂಡ ಸಲ್ಲಿಸಲಿರುವ ವರದಿ ಆಧರಿಸಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಬರ ಪರಿಹಾರ ಹಣವನ್ನು ಬಿಡುಗಡೆ ಮಾಡಲಿದೆ.

217 ತಾಲ್ಲೂಕುಗಳು ಬರ ಪೀಡಿತ
ರಾಜ್ಯದಲ್ಲಿ ಮಳೆ ಕೊರತೆ ಎದುರಿಸಿರುವ ಒಟ್ಟು 217 ತಾಲ್ಲೂಕುಗಳನ್ನು ಬರ ಪೀಡಿತ ತಾಲ್ಲೂಕುಗಳೆಂದು ರಾಜ್ಯ ಸರ್ಕಾರ ಘೋಷಣೆ ಮಾಡಿದೆ. ಈ ಪೈಕಿ 177 ತಾಲ್ಲೂಕುಗಳಲ್ಲಿ ಸುಮಾರು 46 ಸಾವಿರ ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಇನ್ನು 40 ತಾಲ್ಲೂಕುಗಳಲ್ಲಿ ನಷ್ಟದ ಅಂದಾಜು ನಡೆದಿದೆ.

ಸಿಎಂ ಜೊತೆ ಕೇಂದ್ರ ತಂಡ ಸಭೆ :
ರಾಜ್ಯದ ವಿವಿಧೆಡೆ ಕೇಂದ್ರ ಅಧ್ಯಯನ ತಂಡಗಳು ಬರ ವೀಕ್ಷಣೆ ನಡೆಸಿರುವಾಗಲೇ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದ ಜಂಟಿ ಕಾರ್ಯದರ್ಶಿ ಅಜಿತ್‌ಕುಮಾರ್ ಸಾಹು ನೇತೃತ್ವದ ಒಂದು ತಂಡ ಬರ ವೀಕ್ಷಣೆಗೆ ಪೂರ್ವಭಾವಿಯಾಗಿ ಇಂದು ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿಗಳೊಂದಿಗೆ ಸಭೆ ನಡೆಸಿ, ಬರ ಪರಿಸ್ಥಿತಿಯ ಮಾಹಿತಿಯನ್ನು ಪಡೆದುಕೊಂಡಿತು.

ಈ ಸಭೆಯಲ್ಲಿ ರಾಜ್ಯದ ಬರ ಪರಿಸ್ಥಿತಿಯ ಬಗ್ಗೆ ಕೇಂದ್ರ ತಂಡಕ್ಕೆ ಅಂಕಿ-ಅಂಶಗಳ ಸಮೇತ ಮನವರಿಕೆ ಮಾಡಿ ಕೊಡಲಾಯಿತು.
ರಾಜ್ಯದ 217 ತಾಲ್ಲೂಕುಗಳು ಬರ ಪೀಡಿತವಾಗಿವೆ. ಈ ತಾಲ್ಲೂಕುಗಳಲ್ಲಿ ಯಾವೆಲ್ಲಾ ಪರಿಸ್ಥಿತಿ ಇದೆ, ಎಷ್ಟು ಬೆಳೆ ನಷ್ಟವಾಗಿದೆ, ಎಲ್ಲ ಮಾಹಿತಿಯನ್ನು ಕೇಂದ್ರ ತಂಡಕ್ಕೆ ರಾಜ್ಯ ಸರ್ಕಾರ ನೀಡಿದೆ.
ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ನಡೆದ ಈ ಸಭೆಯಲ್ಲಿ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್, ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಎಲ್.ಕೆ. ಅತೀಕ್, ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತೆ ಡಾ. ಉಮಾಮಹದೇವನ್, ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಆರ್ಥಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ರಿತೇಶ್‌ಕುಮಾರ್ ಸಿಂಗ್, ಕಂದಾಯ ಇಲಾಖೆ ವಿಪತ್ತು ನಿರ್ವಹಣೆ ಪ್ರಧಾನ ಕಾರ್ಯದರ್ಶಿ ಮನೋಜ್‌ಕುಮಾರ್ ಮೀನಾ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಮಂಡಯ ಜಿಲ್ಲೆಗೆ ಭೇಟಿ: ಬರ ವೀಕ್ಷಣೆ :

ರಾಜ್ಯದ ಬರ ಪರಿಸ್ಥಿತಿ ಅಧ್ಯಯನಕ್ಕೆ ಆಗಮಿಸಿರುವ ಮೂರು ತಂಡಗಳ ಪೈಕಿ ಕೇಂದ್ರದ ಕೃಷಿ ಇಲಾಖೆಯ ಜಂಟಿ ಕಾರ್ಯದರ್ಶಿ ಅಜಿತ್‌ಕುಮಾರ್ ಸಾಹು ನೇತೃತ್ವದ ತಂಡ ಬೆಂಗಳೂರಿನಲ್ಲಿ ಬರ ವೀಕ್ಷಣೆಗೂ ಮೊದಲು ಮುಖ್ಯಮಂತ್ರಿಗಳೊಂದಿಗೆ ಸಭೆ ನಡೆಸಿದ್ದರೆ, 2ನೇ ತಂಡ ಬರ ಪೀಡಿತ ಮಂಡ್ಯ ಜಿಲ್ಲೆಗೆ ಭೇಟಿ ನೀಡಿ ಬರ ಪರಿಸ್ಥಿತಿಯ ವೀಕ್ಷಣೆ ನಡೆಸಿದೆ. ಉಣಥಿ& ಐಠಛಿಚಿಟ ಉಣಹುಜಛ ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿ ಡಾ. ನವೀನ್‌ಕುಮಾರ್ ಜೈನ್ ನೇತೃತ್ವದ ಅಧಿಕಾರಿಗಳ ತಂಡ ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಜಲಾಶಯಕ್ಕೆ ಭೇಟಿ ನೀಡಿ ನೀರಿನ ಸಂಗ್ರಹದ ಬಗ್ಗೆ ಮಾಹಿತಿ ಪಡೆದುಕೊಂಡಿತು.

ಹಾಗೆಯೇ ಮಂಡ್ಯ ಜಿಲ್ಲೆಯ ಹಲವು ಗ್ರಾಮಗಳಿಗೆ ಭೇಟಿ ನೀಡಿ ಬರ ಪರಿಸ್ಥಿತಿಯ ನೈತ ಸ್ಥಿತಿಗತಿಯ ಮಾಹಿತಿಯನ್ನು ಕಲೆ ಹಾಕಿತು.
ಕೆಆರ್‌ಎಸ್ ಜಲಾಶಯದ ವೀಕ್ಷಣೆ ಸಂದರ್ಭದಲ್ಲಿ ಜಲಾಶಯದ ಪ್ರಸ್ತುತ ನೀರಿನ ಮಟ್ಟ, ಒಳ ಹರಿವು ಹಾಗೂ ಹೊರ ಹರಿವು ಎಲ್ಲದರ ಬಗ್ಗೆಯೂ ಮಾಹಿತಿಯನ್ನು ಕೇಂದ್ರ ಬರ ಅಧ್ಯಯನ ತಂಡ ಪಡೆದುಕೊಂಡಿತು.
ಇದಾದ ಬಳಿಕ ಬರದಿಂದ ಸಂಕಷ್ಟದಲ್ಲಿರುವ ರೈತರ ಅಹವಾಲನ್ನು ಆಲಿಸಿ, ಬರ ಪರಿಸ್ಥಿತಿಯ ಬಗ್ಗೆ ಸ್ಥಳೀಯರಿಂದ ಮಾಹಿತಿಯನ್ನು ಪಡೆದುಕೊಂಡಿತು.

# ಬರಗಾಲದ ನಡುವೆ ರೈತರಿಗೆ ವಿದ್ಯುತ್ ಸಂಕಷ್ಟ: 10 ತಾಸು ಪೂರೈಕೆಗೆ ಆಗ್ರಹ



ಧೈರ್ಯದ ದಾರಿ

**ಮಾನ್ವಿ :** ತಾಲೂಕಿನಲ್ಲಿ ಬರ ಪರಿಸ್ಥಿತಿ ನಿರ್ಮಾಣವಾಗಿದ್ದು, ಮಳೆ ಸಮರ್ಪಕವಾಗಿ ಬಾರದ ಹಿನ್ನೆಲೆಯಲ್ಲಿ ರೈತರು ತಮ್ಮ ಬೆಳೆಗಳನ್ನು ಉಳಿಸಿಕೊಳ್ಳಲು ನದಿ ನೀರು ಹಾಗೂ ಕೊಳವೆಬಾವಿಗಳನ್ನು ಅವಲಂಬಿಸಿದ್ದಾರೆ. ಆದರೆ ಜೆಸ್ಕಾಂ ಇಲಾಖೆಯಿಂದ ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆಯಾಗದ ಕಾರಣ ಬೆಳೆಗಳು ಒಣಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಮಾಜಿ ಶಾಸಕ ಗಂಗಾಧರ ನಾಯಕ ಹೇಳಿದರು.
ಪಟ್ಟಣದ ಜೆಸ್ಕಾಂ ಇಲಾಖೆಯ ಕಚೇರಿ ಆವರಣದಲ್ಲಿ ಭಾರತೀಯ ಜನತಾ ಪಾರ್ಟಿ ಮಾನ್ವಿ ಮಂಡಲ ವತಿಯಿಂದ ಜೆಸ್ಕಾಂ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ವೈಜಾನಾಥ ಸ್ವಾಮಿ ಅವರಿಗೆ ಮನವಿ ಸಲ್ಲಿಸಿ ಅವರು ಮಾತನಾಡಿದರು.
ನದಿ ಪಾತ್ರದ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಕನಿಷ್ಠ 10 ಗಂಟೆಗಳ ಕಾಲ ನಿರಂತರ ಹಾಗೂ ಸಮರ್ಪಕ ವಿದ್ಯುತ್ ಪೂರೈಸಬೇಕು. ಅಗತ್ಯವಿರುವ ಕಡೆ ಐ.ಪಿ. ಲೈನ್‌ಗಳ ವಿಸ್ತರಣೆ ಹಾಗೂ ಹೊಸ ಐ.ಪಿ. ಲೈನ್‌ಗಳ ನಿರ್ಮಾಣ ಮಾಡಬೇಕು. ವಿದ್ಯುತ್ ಸಂಪರ್ಕ ಸಮರ್ಪಕವಾಗಿ ಇಲ್ಲದ ಕೃಷಿ ಜಮೀನುಗಳಿಗೆ ಹೊಸ ವಿದ್ಯುತ್ ಸಂಪರ್ಕ ಕಲ್ಪಿಸಬೇಕು ಎಂದು ಒತ್ತಾಯಿಸಿದರು.
ಹೊಸ ವಿದ್ಯುತ್ ಸಂಪರ್ಕಕ್ಕಾಗಿ ರೈತರು ಸಲ್ಲಿಸಿರುವ ಅರ್ಜಿಗಳನ್ನು ತ್ವರಿತವಾಗಿ ಪರಿಶೀಲಿಸಿ ಆದ್ಯತೆಯ ಮೇರೆಗೆ ಸಂಪರ್ಕ ಕಲ್ಪಿಸಬೇಕು. ಬಾಕಿ ಇರುವ ವಿದ್ಯುತ್ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಿ ರೈತರಿಗೆ ಅನುಕೂಲ ಕಲ್ಪಿಸಬೇಕು ಎಂದು ಆಗ್ರಹಿಸಿದರು.
ಈ ಸಂದರ್ಭದಲ್ಲಿ ಬಿಜೆಪಿ ಮಾನ್ವಿ ಮಂಡಲ ಅಧ್ಯಕ್ಷ ವೀರಭದ್ರಗೌಡ ಭೋಗಾವತಿ, ಪ್ರಧಾನ ಕಾರ್ಯದರ್ಶಿಗಳಾದ ಗುರುಸಿದ್ದಪ್ಪ ಕಣ್ಣೂರು, ಹನುಮೇಶ ನಾಯಕ, ಶರಣಪ್ಪಗೌಡ ನಕ್ಕುಂದಿ, ಉಮೇಶ ಸಜ್ಜನ, ಜೆ. ಸುಧಾಕರ, ಕೆ. ನಾಗಲಿಂಗಸ್ವಾಮಿ, ಮಲ್ಲಿಕಾರ್ಜುನಗೌಡ ಸಂಗಾಪುರ, ರುದ್ರಗೌಡ ಮದ್ಲಾಪುರ, ವಿರೂಪಾಕ್ಷಿಗೌಡ ನುಗಡೋಣಿ, ವೀರನಗೌಡ ವಕೀಲರು, ಜಗದೀಶ ಓತೂರು, ರವಿಕುಮಾರ ಆಲ್ದಾಳ, ಶಿವಲಿಂಗಯ್ಯ ಸ್ವಾಮಿ, ಕುಮಾರಸ್ವಾಮಿ ಮೇದಾರ, ಅಮರೇಶ ನಾಯಕ ಜಾನೇಕಲ್ ಸೇರಿದಂತೆ ತಾಲೂಕಿನ ರೈತರು ಉಪಸ್ಥಿತರಿದ್ದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
6360866626

# ವಿಶ್ವವಿಖ್ಯಾತ ಮೈಸೂರು ದಸರಾ ಉತ್ಸವಕ್ಕೆ ಮೈಸೂರು ಜಿಲ್ಲಾಡಳಿತದ ವತಿಯಿಂದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಹ್ವಾನ

ಧೈರ್ಯದ ದಾರಿ

**ತಾಂಡವಪುರ ಅಕ್ಟೋಬರ್ 3** ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಕಾರ್ಯಕ್ರಮಕ್ಕೆ ಭಾಗವಹಿಸುವಂತೆ ಮೈಸೂರು ಜಿಲ್ಲಾಡಳಿತ ವತಿಯಿಂದ ಬೆಂಗಳೂರಿನ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನಿವಾಸದಲ್ಲಿ ಸಿದ್ದರಾಮಯ್ಯನವರನ್ನು ಭೇಟಿ ಮಾಡಿ ಆಹ್ವಾನ ಪತ್ರಿಕೆ ನೀಡಿ ಕೋರಿಕೊಂಡರು
ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರ ತವರು ಕ್ಷೇತ್ರ ಮೈಸೂರು ಜಿಲ್ಲೆಯಲ್ಲಿ ನಡೆಯುತ್ತಿರುವ ಐತಿಹಾಸಿಕ ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಕಾರ್ಯಕ್ರಮಗಳು ಬಹಳ ಅಚ್ಚುಕಟ್ಟಾಗಿ ಹೊಸತರದ ವಿನೂತನ ಕಾರ್ಯಕ್ರಮಗಳನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದ್ದು ಈಗಾಗಲೇ ದಸರಾ ಕಾರ್ಯಕ್ರಮಗಳು ಶುರುವಾಗಿದ್ದು ದಸರಾ ಉದ್ಘಾಟನೆ ಕಾರ್ಯಕ್ರಮಗಳಿಗೆ ಭಾಗವಹಿಸುವಂತೆ ಮಾಜಿ ಮುಖ್ಯಮಂತ್ರಿ ಮೈಸೂರು ಜಿಲ್ಲೆಯವರೆ



ಆದ ಸಿದ್ದರಾಮಯ್ಯ ಅವರನ್ನು ಮೈಸೂರು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಭೇಟಿ ಮಾಡಿ ದಸರಾ ಉತ್ಸವದಲ್ಲಿ ಪಾಲ್ಗೊಳ್ಳಬೇಕೆಂದು ವಿನಂತಿಸಿದರು
ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾಧಿಕಾರಿಗಳಾದ ಜಿ ಲಕ್ಷ್ಮಿಕಾಂತ್ ರೆಡ್ಡಿ ಹಾಗೂ ಮಹಿಳಾ ಅಧಿಕಾರಿಗಳು ಮುಂತಾದವರು ಈ ಸಂದರ್ಭದಲ್ಲಿ ಹಾಜರಿದ್ದರು

# ಜನರ ಮನೆ ಬಾಗಿಲಿಗೆ ಸರ್ಕಾರ – ಜನರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ. ಸಾರ್ವಜನಿಕರ ಯಾವುದೇ ಸಮಸ್ಯೆಗಳಾಗಲಿ ಕೂಡಲೆ ಸ್ಪಂದಿಸಿ, ಜನರಿಂದ ಮತ್ತೆ ದೂರಗಳು ಕೇಳಿ ಬಂದರೆ ಕ್ರಮ ಕೈಗೊಳ್ಳಲಾಗುವುದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಸೂಚನೆ



ಧೈರ್ಯದ ದಾರಿ

**ತಾಂಡವಪುರ ಅಕ್ಟೋಬರ್ 3:**ಜನರ ಮನೆ ಬಾಗಿಲಿಗೆ ಸರ್ಕಾರ – ಜನರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ. ಸಾರ್ವಜನಿಕರ ಯಾವುದೇ ಸಮಸ್ಯೆಗಳಾಗಲಿ ಕೂಡಲೆ ಸ್ಪಂದಿಸಿ, ಜನರಿಂದ ಮತ್ತೆ ದೂರಗಳು ಕೇಳಿ ಬಂದರೆ ಕ್ರಮ ಕೈಗೊಳ್ಳಲಾಗುವುದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಸೂಚನೆ ನೀಡಿದರು
ಅವರು ಇಂದು ಮೈಸೂರು ಜಿಲ್ಲೆ ಆಡಳಿತ ವತಿಯಿಂದ ಪಿರಿಯಾಪಟ್ಟಣ ತಾಲ್ಲೂಕು ಕ್ರೀಡಾಂಗಣದಲ್ಲಿ ಆಯೋಜಿಸಿದ್ದ 'ಪ್ರಜಾಸೇವಾ ಅಭಿಯಾನ' ಕಾರ್ಯಕ್ರಮ ವನ್ನು ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿಗಳು ಸ್ಥಳದಲ್ಲಿ ಇದ್ದ ಸಾರ್ವಜನಿಕರನ್ನು ಕರೆದು ನಿಮ್ಮ ಸಮಸ್ಯೆ ಏನು ಎಂದು ಹೇಳಿದಾಗ ಸಾರ್ವಜನಿಕರು ತಮ್ಮ ಹಲವಾರು ಸಮಸ್ಯೆಗಳನ್ನು ಮುಖ್ಯಮಂತ್ರಿಗಳ ಬಳಿ ಹೇಳಿಕೊಂಡರು ಕೆಲವು ಪೊಲೀಸ್ ಇಲಾಖೆಯ ಸಮಸ್ಯೆಗಳು ಮುಂತಾದ ಸಮಸ್ಯೆಗಳನ್ನು ಸಾರ್ವಜನಿಕರು ಮುಖ್ಯಮಂತ್ರಿಗಳಲ್ಲಿ ವಿನಿಮಯ ಮಾಡಿಕೊಂಡು ಸಮಸ್ಯೆ ಆಲಿಸಿದ ಮುಖ್ಯಮಂತ್ರಿಗಳು ಸಾರ್ವಜನಿಕರು ಯಾವುದೇ ದೂರುಗಳನ್ನು ನೀಡಿದರೆ ಕೂಡಲೇ ಅದನ್ನು ಪರಿಗಣಿಸಿ ಕ್ರಮ ಕೈಗೊಳ್ಳಿ ಎಂದು ಅಧಿಕಾರಿಗಳನ್ನು ತೆಗೆದುಕೊಳ್ಳುವ ಮೂಲಕ ಖಡಕ್ ಸೂಚನೆ ನೀಡಿದರು
ಮುಖ್ಯಮಂತ್ರಿ ಶ್ರೀ ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಈ ಅಭಿಯಾನವು ಸರ್ಕಾರ ಮತ್ತು ಜನರ ನಡುವಿನ ಅಂತರವನ್ನು ಕಡಿಮೆ ಮಾಡಿ, ಆಡಳಿತವನ್ನು ಜನರ ಮನೆಬಾಗಿಲಿಗೆ ಕೊಂಡೊಯ್ಯುವ ಮಹತ್ವದ ಹೆಜ್ಜೆಯಾಗಿದೆ. ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾಕ್ಟರ್ ಎಸ್ ಯತೀಂದ್ರ ಸಿದ್ರಾಮಯ್ಯನವರು ಮಾತನಾಡಿ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ನೇತೃತ್ವದ ಸರ್ಕಾರವು ಸರ್ಕಾರವೇ ಜನರ ಬಳಿಗೆ ಹೋಗಿ ಜನರ ಸಮಸ್ಯೆಗಳನ್ನು ಆಲಿಸಬೇಕು ಎಂದು ಈ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದ ಸಚಿವರು
ಸರ್ಕಾರಿ ಕಚೇರಿಗಳಿಗೆ ಜನರು ಅಲೆಯುವ ಬದಲು, ಸರ್ಕಾರವೇ ಜನರ ಬಳಿಗೆ ತೆರಳಿ ಅವರ ಸಮಸ್ಯೆಗಳನ್ನು ಆಲಿಸಿ, ಅರ್ಹ ಫಲಾನುಭವಿಗಳಿಗೆ ಸರ್ಕಾರಿ ಯೋಜನೆಗಳ ಪ್ರಯೋಜನ ತಲುಪಿಸುವುದು ಹಾಗೂ ಸಾರ್ವಜನಿಕರ ಅಹವಾಲುಗಳಿಗೆ ನಿಗದಿತ ಅವಧಿಯಲ್ಲಿ ಪರಿಹಾರ ಒದಗಿಸುವುದು ಈ ಅಭಿಯಾನದ ಪ್ರಮುಖ ಉದ್ದೇಶವಾಗಿದೆ. ಎಂದು ಹೇಳಿದರು



ಸರ್ಕಾರದ ಸೇವೆಗಳನ್ನು ಸುಲಭವಾಗಿ ಜನರಿಗೆ ತಲುಪಿಸುವ ಸೇವಾ ಒನ್ ಪೋರ್ಟಲ್, ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್, ಯುವಜನರ ಅಭಿವೃದ್ಧಿಗಾಗಿ ಭಾರತ್ ಜೋಡೋ ಸಂಘಗಳು, ರೈತರಿಗಾಗಿ 'ನೇಗಿಲ ಯೋಗಿ' ಮತ್ತು 'ರೈತ ಚೈತನ್ಯ' ಕಾರ್ಯಕ್ರಮಗಳು, ವಸತಿ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ 5 ಲಕ್ಷ ನಿವೇಶನಗಳ ಹಂಚಿಕೆ ಹಾಗೂ ಸಾರಿಗೆ ವ್ಯವಸ್ಥೆಯನ್ನು ಮತ್ತಷ್ಟು ಸುಧಾರಿಸುವ ಕ್ರಮಗಳ ಕುರಿತು ಕಾರ್ಯಕ್ರಮದಲ್ಲಿ ವಿವರಿಸಲಾಯಿತು.
ಜನಕೇಂದ್ರಿತ ಆಡಳಿತ, ತ್ವರಿತ ಸೇವೆ ಮತ್ತು ಸಮಗ್ರ ಅಭಿವೃದ್ಧಿಯ ಮೂಲಕ ಜನರ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆ ತರುವುದು ಸರ್ಕಾರದ ಬದ್ಧತೆಯಾಗಿದೆ. ಎಂದು ಸಚಿವರು ತಿಳಿಸಿದರು
ಈ ಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಈಶ್ವರ್ ಖಂಡ್ರೆ, ರಾಜ್ಯಸಭಾ ಸದಸ್ಯರಾದ ಜೆ.ಸಿ. ಚಂದ್ರಶೇಖರ್, ಶಾಸಕರಾದ ಕೆ. ವೆಂಕಟೇಶ್, ಡಿ. ರವಿಶಂಕರ್, ಅನಿಲ್ ಚಿಕ್ಕಮಾದು, ವಿಧಾನ ಪರಿಷತ್ ಸದಸ್ಯರಾದ ಡಾ. ಡಿ. ತಿಮ್ಮಯ್ಯ, ಹಿರಿಯ ಪತ್ರಕರ್ತರಾದ ಕೆ ಶಿವಕುಮಾರ್ ಜಿಲ್ಲಾಧಿಕಾರಿಗಳಾದ ಜಿ ಲಕ್ಷ್ಮಿಕಾಂತ್ ರೆಡ್ಡಿ ಹಾಗೂ ತಾಲೂಕಿನ ವಿವಿಧ ಇಲಾಖೆ ಅಧಿಕಾರಿಗಳು ಕಾಂಗ್ರೆಸ್ ಪಕ್ಷದ ಮುಖಂಡರುಗಳು ಜನಪ್ರತಿನಿಧಿಗಳು ಹಾಗೂ ಹಿರಿಯ ಅಧಿಕಾರಿಗಳು ಸಾರ್ವಜನಿಕರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು

# ಶಾರದಾ ಕಾಲೇಜಿನಲ್ಲಿ ಒಂದು ದಿನದ ಯೋಗ ಶಿಬಿರ

**ಮಾನ್ವಿ :** ಶಾರದಾ ಕಾಲೇಜಿನ ಬಿ.ಎಡ್. ಪ್ರಥಮ ವರ್ಷದ ಶಿಕ್ಷಣಾರ್ಥಿಗಳಿಗಾಗಿ ಯೋಗ ಗುರು ಅನ್ನದಾನಯ್ಯ ಅವರ ನೇತೃತ್ವದಲ್ಲಿ ಒಂದು ದಿನದ ಯೋಗ ಶಿಬಿರವನ್ನು ಆಯೋಜಿಸಲಾಗಿತ್ತು.
ಬೆಳಿಗ್ಗೆ 7ರಿಂದ 11 ಗಂಟೆಯವರೆಗೆ ನಡೆದ ಶಿಬಿರದಲ್ಲಿ ಶಿಕ್ಷಣಾರ್ಥಿಗಳಿಗೆ ಮೊದಲಿಗೆ ವಿವಿಧ ಯೋಗಾಸನಗಳು ಹಾಗೂ ಪ್ರಾಣಾಯಾಮಗಳ ಕುರಿತು ಪ್ರಾಯೋಗಿಕ ತರಬೇತಿ ನೀಡಲಾಯಿತು. ನಂತರ ಯೋಗ ಎಂದರೇನು, ಯೋಗದ ವಿವಿಧ ಹಂತಗಳು, ಯೋಗಾಭ್ಯಾಸಕ್ಕೆ ಸೂಕ್ತವಾದ ಸಮಯ, ಸಾತ್ವಿಕ ಆಹಾರ, ಧ್ಯಾನ ಸೇರಿದಂತೆ ಹಲವು ವಿಷಯಗಳ ಕುರಿತು ವೈಜ್ಞಾನಿಕ ಮಾಹಿತಿಯನ್ನು ನೀಡಲಾಯಿತು.
'ಚಿತ್ತ ವೃತ್ತಿ ನಿರೋಧಃ' ಎಂಬ ಯೋಗದ ವ್ಯಾಖ್ಯಾನದ ಅರ್ಥ ಹಾಗೂ ಮಹತ್ವವನ್ನು ವಿವರಿಸಿದ ಯೋಗ ಗುರು ಅನ್ನದಾನಯ್ಯ ಅವರು ಅಷ್ಟಾಂಗ ಯೋಗದ ಕುರಿತು ವಿಶೇಷ ಮಾಹಿತಿಯನ್ನು ನೀಡಿದರು. ಶಿಕ್ಷಣಾರ್ಥಿಗಳ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಯೋಗಾಭ್ಯಾಸಕ್ಕೆ ಸಂಬಂಧಿಸಿದ ಹಲವು ವಿಚಾರಗಳನ್ನು ತಿಳಿಸಿಕೊಟ್ಟರು.
ಇದೇ ಸಂದರ್ಭದಲ್ಲಿ ಸಾತ್ವಿಕ, ರಾಜಸಿಕ ಹಾಗೂ ತಾಮಸಿಕ ಆಹಾರಗಳ ಗುಣಲಕ್ಷಣಗಳು ಮತ್ತು ಅವುಗಳ ಮಹತ್ವದ ಕುರಿತು ವಿವರವಾಗಿ ಮಾಹಿತಿ ನೀಡಲಾಯಿತು. ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ನೆಮ್ಮದಿಗಾಗಿ ಧ್ಯಾನ ಮತ್ತು ನಿಯಮಿತ ಯೋಗಾಭ್ಯಾಸದ ಅಗತ್ಯವನ್ನು ತಿಳಿಸಲಾಯಿತು.ಶಿಬಿರದ ಸಮಾರೋಪ ಸಮಾರಂಭದ ಆರಂಭದಲ್ಲಿ ಲಲಿತಾ ಅವರು ಪ್ರಾರ್ಥನಾ ಗೀತೆಯನ್ನು ಹಾಡಿದರು. ಪೀರ್ ಮಹಮದ್ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಈ ಸಂದರ್ಭದಲ್ಲಿ ಪ್ರಶಿಕ್ಷಣಾರ್ಥಿಗಳು ಯೋಗ ಶಿಬಿರದ ಕುರಿತು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಉಪಪ್ರಾಚಾರ್ಯ ವೀರಭದ್ರಯ್ಯ ಹಿರೇಮಠ ಮಾತನಾಡಿ, ಯೋಗಾಭ್ಯಾಸವು ನಮ್ಮ ಜೀವನದ ಅವಿಭಾಜ್ಯ ಅಂಗವಾಗಬೇಕು ಎಂದು ಹೇಳಿದರು.ಉಪನ್ಯಾಸಕ ಆನಂದ್ ಮಾತನಾಡಿ,





ಸದೃಢವಾದ ದೇಹದಲ್ಲಿ ಸದೃಢವಾದ ಮನಸ್ಸನ್ನು ಹೊಂದಲು ಯೋಗಾಭ್ಯಾಸ ಸಹಕಾರಿಯಾಗಿದೆ ಎಂದು ತಿಳಿಸಿದರು.ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಪರಮೇಶ್ವರಪ್ಪ ಗೋಪಶೆಟ್ಟಿ ಮಾತನಾಡಿ, ಯೋಗವು ವೈಜ್ಞಾನಿಕವಾದ ಅಭ್ಯಾಸವಾಗಿದ್ದು, ಆರೋಗ್ಯ ಕಾಪಾಡಿಕೊಳ್ಳುವಲ್ಲಿ ಹಾಗೂ ಹಲವು ರೋಗಗಳನ್ನು ನಿಯಂತ್ರಿಸುವಲ್ಲಿ ಸಹಕಾರಿಯಾಗಿದೆ ಎಂದು ಹೇಳಿದರು.ಕೊನೆಯಲ್ಲಿ ಯೋಗ ಗುರು ಅನ್ನದಾನಯ್ಯ ಅವರನ್ನು ಸನ್ಮಾನಿಸಲಾಯಿತು. ಬಿ.ಎಡ್. ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳು ಶಿಬಿರದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ಅಕ್ಟೋಬರ್ 04ರಂದು ರಾಯಚೂರು ಜಿಲ್ಲೆಯ ಬರ ವೀಕ್ಷಣೆಗೆ ಕೇಂದ್ರ ತಂಡ ಆಗಮನ

**ರಾಯಚೂರು ಅಕ್ಟೋಬರ್ 03:** ಭಾರತ ಸರ್ಕಾರದ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯದ ಜಂಟಿ ಕಾರ್ಯದರ್ಶಿ ಅಜಿತ್ ಕುಮಾರ್ ಸಾಹು. ಐಎಎಸ್ ಅವರ ನೇತೃತ್ವದಲ್ಲಿ 10 ಸದಸ್ಯರನ್ನು ಒಳಗೊಂಡ 3 ಉಪ ತಂಡಗಳ ಅಂತರ ಸಚಿವಾಲಯದ ಕೇಂದ್ರ ಬರ ಅಧ್ಯಯನ ತಂಡವು ರಾಜ್ಯದ ತುಮಕೂರು, ಚಿತ್ರದುರ್ಗ, ದಾವಣಗೆರೆ, ವಿಜಯನಗರ, ಹಾಸನ, ಮೈಸೂರು, ಚಾಮರಾಜನಗರ, ಮಂಡ್ಯ, ಯಾದಗಿರಿ, ರಾಯಚೂರು, ಬಾಗಲಕೋಟೆ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಬರ ವೀಕ್ಷಣೆಗಾಗಿ ಅಕ್ಟೋಬರ್ 03ರಿಂದ 07ರವರೆಗೆ ರಾಜ್ಯದಲ್ಲಿ ತಾತ್ಕಾಲಿಕ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ರಾಯಚೂರು ಜಿಲ್ಲೆಗೆ ಅಕ್ಟೋಬರ್ 04ರಂದು ಇದರ ಮೂರನೇ ತಂಡವು ಭೇಟಿ ನೀಡಿ, ಬರ ವೀಕ್ಷಣೆ ಮಾಡಲಿದೆ.

ಈ ತಂಡದಲ್ಲಿ ಪಾಟ್ನಾದ ಭತ್ತ ಅಭಿವೃದ್ಧಿ ಇಲಾಖೆಯ ನಿರ್ದೇಶಕರಾದ ಡಾ. ಮಾನ್ ಸಿಂಗ್ ಅವರು ತಂಡದ ಮುಖ್ಯಸ್ಥರಾಗಿ ಕಾರ್ಯನಿರ್ವಹಣೆ ಮಾಡಲಿದ್ದಾರೆ.

ಭಾರತ ಸರ್ಕಾರದ ವೆಚ್ಚ ಇಲಾಖೆಯ ಅಧೀನ ಕಾರ್ಯದರ್ಶಿ ಪಾರ್ಥ ಪಾಲ್ ಹಾಗೂ ಭಾರತ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ರಾಕೇಶ್ ಕುಮಾರ್ ಅವರು ಕಾರ್ಯನಿರ್ವಹಣೆ ಮಾಡಲಿದ್ದಾರೆ.

ಕೇಂದ್ರ ತಂಡವು ಯಾದಗಿರಿ ಜಿಲ್ಲೆಯ ಶಹಪೂರಿನಿಂದ ಮಧ್ಯಾಹ್ನ ರಾಯಚೂರು ಜಿಲ್ಲೆಯ ದೇವದುರ್ಗಕ್ಕೆ ಆಗಮಿಸಿ, ದೇವದುರ್ಗದ ತಾಲೂಕು ಪಂಚಾಯತ್ ಕಚೇರಿಯಲ್ಲಿ 12 ರಿಂದ 1.30ರವರೆಗೆ ಅಧಿಕಾರಿಗಳೊಂದಿಗೆ ಸಭೆ ನಡೆಸುವರು.

ನಂತರ ದೇವದುರ್ಗ ತಾಲೂಕಿನ ಮಸರಕಲ್ ಗ್ರಾಮದ ಹತ್ತಿ ಬೆಳೆ ಕ್ಷೇತ್ರ ಹಾಗೂ ಮೆಣಸಿನಕಾಯಿ ಬೆಳೆ ಹಾನಿ ಕ್ಷೇತ್ರದ ವೀಕ್ಷಣೆ ಮಾಡಿ, ಅರಕೇರಾ ತಾಲೂಕಿನ ಎನ್. ಗಣೇಕಲ್ ಗ್ರಾಮಕ್ಕೆ ಭೇಟಿ ನೀಡಿ ವಿಬಿಜಿ ರಾಮ್‌ಜಿ ಕಾಮಗಾರಿ ಸ್ಥಳ ಹಾಗೂ ಹತ್ತಿ ಬೆಳೆ ಕ್ಷೇತ್ರ ವೀಕ್ಷಣೆ ಮಾಡುವರು.

ನಂತರ ಮಧ್ಯಾಹ್ನ 3.30 ರಿಂದ 3.50ರವರೆಗೆ ರಾಯಚೂರು ತಾಲೂಕಿನ ಮರ್ರಾನಪುರ ಗ್ರಾಮಕ್ಕೆ ಭೇಟಿ ನೀಡಿ, ಹತ್ತಿ ಬೆಳೆ ಕ್ಷೇತ್ರ ಹಾಗೂ ಮೇವಿನ ಮಿನಿಕಿಟ್ ಫಲಾನುಭವಿಗಳೊಂದಿಗೆ ಸಂವಾದ ನಡೆಸಲಿದ್ದಾರೆ.

ನಂತರ ಸಂಜೆ 4:50 ರಿಂದ 5:10ರವರೆಗೆ ಮಸ್ಕಿ ತಾಲೂಕಿನ ಕೋಟ್ನೆಕಲ್ ಗ್ರಾಮಕ್ಕೆ ಭೇಟಿ ನೀಡಿ, ಹತ್ತಿ ಬೆಳೆ ಕ್ಷೇತ್ರ ಮಾಡಿ, ಲಿಂಗಸುಗೂರು ತಾಲೂಕಿನ ಸರ್ಜಾಪುರ ಹಾಗೂ ಯರಡೋಣ ಗ್ರಾಮಕ್ಕೆ ತೆರಳಿ ತೊಗರಿ ಕ್ಷೇತ್ರವನ್ನು ವೀಕ್ಷಣೆ ಮಾಡಿ, ಹಟ್ಟಿಯಲ್ಲಿ ಉಪಹಾರವನ್ನು ಮಾಡಿ ಸಂಜೆ 7ಕ್ಕೆ ಮುದಗಲ್, ಹುನಗುಂದ ಮಾರ್ಗವಾಗಿ ಬಾಗಲಕೋಟೆ ಜಿಲ್ಲೆಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ರಾಯಚೂರು ಜಿಲ್ಲಾಧಿಕಾರಿಗಳ ಕಚೇರಿಯ ಪ್ರಕಟಣೆ ತಿಳಿಸಿದೆ.

## ಅಕ್ಟೋಬರ್ 30ರಂದು ಜಿಲ್ಲಾ ಮಟ್ಟದ ಯುವಜನೋತ್ಸವ ಆಯ್ಕೆ ಪ್ರಕ್ರಿಯೆ

**ರಾಯಚೂರು ಅಕ್ಟೋಬರ್ 03** : ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ 2026-27ನೇ ಸಾಲಿನ ರಾಯಚೂರು ಜಿಲ್ಲಾ ಮಟ್ಟದ ಯುವಜನೋತ್ಸವ ಆಯ್ಕೆ ಪ್ರಕ್ರಿಯೆಯನ್ನು 15 ರಿಂದ 29 ವರ್ಷದೊಳಗಿನವರಿಗೆ ಅಕ್ಟೋಬರ್ 30ರ ಬೆಳಿಗ್ಗೆ 9ಗಂಟೆಗೆ ನಗರದ ವೇದಾಂತ ಡಿಗ್ರಿ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದು, ಈ ಆಯ್ಕೆ ಪ್ರಕ್ರಿಯೆಯಲ್ಲಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಶಾಲಾ, ಕಾಲೇಜು ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರು ಹಾಗೂ ಸಂಘ-ಸಂಸ್ಥೆಗಳು, ಯುವಕ/ ಯುವತಿ ಮಂಡಳಿಗಳು ಇನ್ನಿತರೇ ಸಂಸ್ಥೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಸ್ಪರ್ಧಾಳುಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವಿರೇಶ ನಾಯಕ ಅವರು ತಿಳಿಸಿದ್ದಾರೆ. ನಿಗದಿಪಡಿಸಿದ ದಿನಾಂಕ ಹಾಗೂ ಸ್ಥಳದಂದು ಬೆಳಿಗ್ಗೆ 9ಗಂಟೆಯ ಒಳಗಾಗಿ ಸ್ಪರ್ಧಾಳುಗಳು ತಮ್ಮ ಹೆಸರನ್ನು ನೋಂದಾಯಿಸಕೊಳ್ಳತಕ್ಕದ್ದು, ವಯಸ್ಸಿನ ದೃಢೀಕರಣಕ್ಕೆ ಆಧಾರ ಕಾರ್ಡ ,ಗುರುತಿನ ಚೀಟಿ ಅಥವಾ ಜನ್ಮ ದಿನಾಂಕ ಇರುವ ಸರಕಾರಿ ಪ್ರಮಾಣಪತ್ರವನ್ನು ಹಾಗೂ ಸ್ವಯಂ ಬ್ಯಾಂಕ್ ಖಾತೆಯ ಝರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸುವುದು.

ಸಾಂಸ್ಕೃತಿಕ ಸ್ಪರ್ಧೆಗಳ ವಿವರ: ಜನಪದನೃತ್ಯ ತಂಡದಲ್ಲಿ 7+3 ಭಾಗವಹಿಸುವರ ಸಂಖ್ಯೆಯನ್ನು ಮಿತಿಗೊಳಿಸಲಾಗಿದ್ದು, 5 ರಿಂದ 8 ನಿಮಿಷಕ್ಕೆ ಅವಧಿಯನ್ನು ನಿಗದಿಪಡಿಸಲಾಗಿದೆ.ಜನಪದ ಗೀತೆ ತಂಡದಲ್ಲಿ 7+3 ಭಾಗವಹಿಸುವರ ಸಂಖ್ಯೆಯನ್ನು ಮಿತಿಗೊಳಿಸಲಾಗಿದ್ದು, 5 ರಿಂದ 8 ನಿಮಿಷಕ್ಕೆ ಅವಧಿಯನ್ನು ನಿಗದಿಪಡಿಸಲಾಗಿದೆ. ಕವಿತೆ ಬರೆಯುವುದು (ಪ್ರಾದೇಶಿಕಭಾಷೆ/ ಹಿಂದಿ/ಆಂಗ್ಲ) ಒಬ್ಬರು ಭಾಗವಹಿಸುವರ ಸಂಖ್ಯೆಯನ್ನು ಮಿತಿಗೊಳಿಸಲಾಗಿದ್ದು, 1 ಗಂಟೆ 30 ನಿಮಿಷಕ್ಕೆ ಅವಧಿಯನ್ನು ನಿಗದಿಪಡಿಸಲಾಗಿದೆ.

ನುಕ್ಕಾಡ್ ನಾಟಕ 10 ಜನ ಭಾಗವಹಿಸುವರ ಸಂಖ್ಯೆಯನ್ನು ಮಿತಿಗೊಳಿಸಲಾಗಿದ್ದು, ಯಾವುದೇ ಸಮಯವನ್ನು ನಿಗದಿಪಡಿಸಿರುವುದಿಲ್ಲ. ಚಿತ್ರಕಲೆ (ವೈಯಕ್ತಿಕ) 6 ಗಂಟೆ ನಿಮಿಷಕ್ಕೆ ಅವಧಿಯನ್ನು ನಿಗದಿಪಡಿಸಲಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ವಿರೇಶ ನಾಯಕ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುದ್ದಿ ಮತ್ತು
ಜಾಹೀರಾತಿಗಾಗಿ
ಸಂಪರ್ಕಿಸಿ
6360866626

# ಸೂರ್ಯಕಾಂತಿ ಉತ್ಪನ್ನ ಖರೀದಿ ಕೇಂದ್ರ ಪ್ರಾರಂಭ: ಜಿಲ್ಲಾಧಿಕಾರಿ ಪೂವಿತಾ ಎಸ್.

ಧೈರ್ಯದ ದಾರಿ



**ರಾಯಚೂರು ಅಕ್ಟೋಬರ್ 03:** ಸರ್ಕಾರದ ಆದೇಶದಂತೆ 2026-27ನೇ ಸಾಲಿಗೆ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಮುಂಗಾರು ಹಂಗಾಮಿನ ಸೂರ್ಯಕಾಂತಿ ಉತ್ಪನ್ನವನ್ನು ಪ್ರತಿ ಎಕರಿಗೆ 4 ಕ್ವಿಂಟಾಲ್ ಹಾಗೂ ಪ್ರತಿ ರೈತರಿಂದ ಗರಿಷ್ಠ 20 ಕ್ವಿಂಟಾಲ್ ಎಫ್.ಎ.ಕ್ಯೂ ಗುಣಮಟ್ಟದ ಪ್ರತಿ ಕ್ವಿಂಟಾಲ್‌ಗೆ 8,343 ರೂ. ರಂತೆ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ ಎಂದು ಟಾಸ್ಕ್ ಪೋರ್ಸ್ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್. ಅವರು ತಿಳಿಸಿದ್ದಾರೆ.

ದಿನಾಂಕ: 01-10-2026 ರಿಂದ ರೈತರ ನೊಂದಣಿ ಕಾಲಾವಧಿಯನ್ನು 80 ದಿನಗಳವರೆಗೆ ಹಾಗೂ ಖರೀದಿ ಅವಧಿಯನ್ನು 90 ದಿನಗಳವರೆಗೆ ನಿಗಧಿಪಡಿಸಿದೆ. ರೈತರಿಂದ ಸೂರ್ಯಕಾಂತಿಯನ್ನು ಖರೀದಿಸುವ ಸಂಬಂಧ ರಾಯಚೂರು ತಾಲೂಕಿನ ಖರೀದಿ ಕೇಂದ್ರ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘ, ಹುಣಸಿಹಾಳಹುಡಾ ರಾಯಚೂರು. ಮೊ.ನಂ. 9743695467ಗೆ ಸಂಪರ್ಕ ಮಾಡಬಹುದಾಗಿದೆ.

ದೇವದುರ್ಗ ತಾಲೂಕಿನ ಖರೀದಿ ಕೇಂದ್ರ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘ, ಜಾಲಹಳ್ಳಿ. ಮೊ.ನಂ. 7899312989ಗೆ ಸಂಪರ್ಕ ಮಾಡಬಹುದಾಗಿದೆ.

ಲಿಂಗಸುಗೂರು ತಾಲೂಕಿನ ಖರೀದಿ ಕೇಂದ್ರಗಳಾದ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘ, ಮಟ್ಟೂರು ಮೊ.ನಂ. 7022551299 ಹಾಗೂ ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘದ ಲಿಂಗಸುಗೂರು. ಮೊ.ನಂ 8792668442ಗೆ ಸಂಪರ್ಕ ಮಾಡಬಹುದಾಗಿದೆ.

ಸಿಂಧನೂರು ತಾಲೂಕಿನ ಖರೀದಿ ಕೇಂದ್ರಗಳಾದ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘ, ಜವಳಗೇರಾ ಮೊ.ನಂ: 9964315868, ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘ, ಹುಡಾ ಮೊ.ನಂ: 9964315868 ಹಾಗೂ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘ, ಪಗಡದಿನ್ನಿ ಮೊ.ನಂ: 9945738297ಗೆ ಸಂಪರ್ಕ ಮಾಡಬಹುದಾಗಿದೆ.

ಮಾನವಿ ತಾಲೂಕಿನ ಖರೀದಿ ಕೇಂದ್ರ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘ, ತೋರಣದಿನ್ನಿ ಮೊ.ನಂ: 9902387316ಗೆ ಸಂಪರ್ಕ ಮಾಡಬಹುದಾಗಿದೆ.

ಸಿರವಾರ ತಾಲೂಕಿನ ಖರೀದಿ ಕೇಂದ್ರ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘ, ಸಿರವಾರ ಮೊ.ನಂ: 9880891919ಗೆ ಸಂಪರ್ಕ ಮಾಡಬಹುದಾಗಿದೆ.

ಮಸ್ಕಿ ತಾಲೂಕಿನ ಖರೀದಿ ಕೇಂದ್ರ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘ, ಜಾಲವಡಿಗಿ ಮೊ.ನಂ: 8073325424ಗೆ ಸಂಪರ್ಕ ಮಾಡಬಹುದಾಗಿದೆ.

ಈ ಖರಿದಿ ಕೇಂದ್ರಗಳನ್ನು ತೆರೆಯಲಾಗಿದ್ದು, ರೈತರ ಬಾಂಧವರು ಫ್ರೂಟ್ಸ್ ಐ.ಡಿ ಯೊಂದಿಗೆ ತಮ್ಮ ಹತ್ತಿರದ ಖರೀದಿ ಕೇಂದ್ರಗಳಲ್ಲಿ ನೊಂದಾಯಿಸಿ ಸೂರ್ಯಕಾಂತಿ ಮಾರಾಟ ಮಾಡಿ ಸರ್ಕಾರದ ಯೋಜನೆಯ ಸದುಪಯೋಗ ಪರಿಡಿಸಕೊಳ್ಳಲು ಜಿಲ್ಲೆಯ ರೈತ ಬಾಂಧವರಲ್ಲಿ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಕಸಾಪ ಸಾಹಿತ್ಯ ಸಮ್ಮೇಳನವೋ, ರಾಜಕೀಯ ಕಾರ್ಯಕ್ರಮವೋ? : ಗೋಪಿನಾಥ ಮೀಸಿ ಕಪ್ಪು ಬಾವುಟ ಪ್ರದರ್ಶಿಸಿ ಪ್ರತಿಭಟನೆಯ ಎಚ್ಚರಿಕೆ

**ಜಮಖಂಡಿ:** ಕನ್ನಡ ಸಾಹಿತ್ಯ ಪರಿಷತ್ತಿನ ಜಮಖಂಡಿ ತಾಲ್ಲೂಕು ಘಟಕದ ಕಾರ್ಯವೈಖರಿ, ಹಣಕಾಸಿನ ವ್ಯವಹಾರಗಳು ಹಾಗೂ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ಕುರಿತು ಸಮಗ್ರ ಹಾಗೂ ನಿಷ್ಪಕ್ಷಪಾತ ಪರಿಶೀಲನೆ ನಡೆಸಬೇಕು ಎಂದು ದಲಿತ ಮುಖಂಡರು ಆಗ್ರಹಿಸಿದರು.



ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಸಾಪ ತಾಲ್ಲೂಕು ಅಧ್ಯಕ್ಷ ಸಂತೋಷ ತಳಕೇರಿ ಅವರ ಕಸಾಪ ಚಟುವಟಿಕೆಗಳು ಹಾಗೂ ಸರ್ಕಾರಿ ಕರ್ತವ್ಯದ ಕುರಿತು ಶಿಕ್ಷಣ ಇಲಾಖೆ ಪರಿಶೀಲನೆ ನಡೆಸಬೇಕು ಎಂದು ಒತ್ತಾಯಿಸಿದರು.

ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಂತೋಷ ತಳಕೇರಿ ಅವರು ಕಸಾಪ ತಾಲ್ಲೂಕು ಅಧ್ಯಕ್ಷ ಸ್ಥಾನ ವಹಿಸಿಕೊಳ್ಳುವ ಸಂದರ್ಭದಲ್ಲಿ ಅಗತ್ಯ ಅನುಮತಿ ಅಥವಾ ಎಸ್‌ಒಸಿ ಪಡೆದಿದ್ದಾರೆಯೇ ಎಂಬುದನ್ನು ಪರಿಶೀಲಿಸಬೇಕು. ಕಸಾಪ ಚಟುವಟಿಕೆಗಳಿಂದ ಸರ್ಕಾರಿ ಕರ್ತವ್ಯಕ್ಕೆ ಯಾವುದೇ ವ್ಯತ್ಯಯ ಉಂಟಾಗುತ್ತಿದೆಯೇ ಎಂಬುದನ್ನೂ ಶಿಕ್ಷಣ ಇಲಾಖೆ ಪರಿಶೀಲಿಸಬೇಕು ಎಂದು ಗೋಪಿನಾಥ ಮೀಸಿ ಆಗ್ರಹಿಸಿದರು.

ಕಸಾಪದ ಕಾರ್ಯಕ್ರಮಗಳಲ್ಲಿ ಸ್ಥಳೀಯ ಹಿರಿಯ ಸಾಹಿತಿಗಳು, ಕವಿಗಳು ಹಾಗೂ ಯುವ ಬರಹಗಾರರಿಗೆ ಸೂಕ್ತ ಅವಕಾಶ ನೀಡುತ್ತಿಲ್ಲ ಎಂಬ ಆರೋಪವೂ ಕೇಳಿಬರುತ್ತಿದೆ. ರಾಜಕೀಯವಾಗಿ ಗುರುತಿಸಿಕೊಂಡಿರುವ ವ್ಯಕ್ತಿಗಳಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಲಾಗುತ್ತಿದೆ ಎಂಬ ಸಾರ್ವಜನಿಕ ಚರ್ಚೆಯ ಹಿನ್ನೆಲೆಯಲ್ಲಿ "ಇದು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮವೋ ಅಥವಾ ರಾಜಕೀಯ ಕಾರ್ಯಕ್ರಮವೋ?" ಎಂಬ ಪ್ರಶ್ನೆ ಮೂಡಿದೆ ಎಂದು ಅವರು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ನಾಡು, ನುಡಿ, ಜಲ, ಜಾನಪದ ಹಾಗೂ ಸಾಹಿತ್ಯದ ಬೆಳವಣಿಗೆಗಾಗಿ ಇರುವ ವೇದಿಕೆಯಾಗಿದೆ. ಆದರೆ ಜಮಖಂಡಿ ತಾಲ್ಲೂಕಿನಲ್ಲಿ ಸಾಹಿತ್ಯಿಕ ಚಟುವಟಿಕೆಗಳಿಗೆ ಹೆಚ್ಚಿನ ಒತ್ತು ನೀಡುವ ಬದಲು ವೈಯಕ್ತಿಕ ಹಾಗೂ ರಾಜಕೀಯ ಹಿತಾಸಕ್ತಿಗಳಿಗೆ ವೇದಿಕೆ ಬಳಕೆಯಾಗುತ್ತಿದೆ ಎಂಬ ಆರೋಪಗಳ ಕುರಿತು ಪರಿಶೀಲನೆ ನಡೆಸಬೇಕು ಎಂದು ಚನ್ನಬಸು ಗುಣದಾಳ ಹೇಳಿದರು.

ಹಿರಿಯ ಸಾಹಿತಿಗಳಿಗೆ ಗೌರವ ಹಾಗೂ ಯುವ ಸಾಹಿತಿಗಳಿಗೆ ಸೂಕ್ತ ಅವಕಾಶ ಕಲ್ಪಿಸಬೇಕು. ಕಸಾಪದ ವೇದಿಕೆಯನ್ನು ನಿಜವಾದ ಸಾಹಿತ್ಯಿಕ ಚಟುವಟಿಕೆಗಳಿಗೆ ಬಳಸುವಂತಾಗಬೇಕು ಎಂದು ಅವರು ಆಗ್ರಹಿಸಿದರು.

ಹಣಕಾಸಿನ ಲೆಕ್ಕಪತ್ರ ಬಹಿರಂಗಕ್ಕೆ ಒತ್ತಾಯ

ಕಸಾಪದ ಕಾರ್ಯಕ್ರಮಗಳಿಗಾಗಿ ಹಣ ಸಂಗ್ರಹಿಸಲಾಗುತ್ತಿದ್ದರೆ, ಯಾರಿಂದ ಎಷ್ಟು ಹಣ ಸಂಗ್ರಹಿಸಲಾಗಿದೆ, ಯಾವ ಉದ್ದೇಶಕ್ಕೆ ಸಂಗ್ರಹಿಸಲಾಗಿದೆ ಹಾಗೂ ಅದರ ಆದಾಯ-ವೆಚ್ಚದ ಸಂಪೂರ್ಣ ಲೆಕ್ಕಪತ್ರವನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಬೇಕು ಎಂದು ರಮೇಶ ಬಳೋಲಗಿಡದ ಒತ್ತಾಯಿಸಿದರು.

ಕಳೆದ ವರ್ಷದ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಹಣಕಾಸಿನ ವ್ಯವಹಾರಗಳನ್ನೂ ಪರಿಶೀಲಿಸಬೇಕು. ಕಸಾಪ ಯಾರೊಬ್ಬರ ವೈಯಕ್ತಿಕ ಸಂಸ್ಥೆಯಲ್ಲ; ಅದು ಕನ್ನಡಿಗರ ಸಾರ್ವಜನಿಕ ವೇದಿಕೆಯಾಗಿದೆ. ಹೀಗಾಗಿ ಸಂಸ್ಥೆಯ ಹಣಕಾಸಿನ ವ್ಯವಹಾರಗಳಲ್ಲಿ ಸಂಪೂರ್ಣ ಪಾರದರ್ಶಕತೆ ಇರಬೇಕು ಎಂದು ಹೇಳಿದರು.

ವರ್ಷಕ್ಕೊಮ್ಮೆ ಸಮ್ಮೇಳನ ನಡೆಸುವುದಕ್ಕಿಂತ ಇಡೀ ವರ್ಷ ಸ್ಥಳೀಯ ಸಾಹಿತಿಗಳು, ಕವಿಗಳು ಹಾಗೂ ಬರಹಗಾರರನ್ನು ಪ್ರೋತ್ಸಾಹಿಸುವ ಸಾಹಿತ್ಯಿಕ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಎಂದು ಅವರು ಹೇಳಿದರು.ಸಂತೋಷ ತಳಕೇರಿ ಅವರು ಕಸಾಪ ತಾಲ್ಲೂಕು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂಬುದು ತಮ್ಮ ಆಗ್ರಹವಾಗಿದೆ. ತಮ್ಮ ವಿರೋಧ ಕನ್ನಡ ಸಾಹಿತ್ಯ ಪರಿಷತ್ತಿನ ವಿರುದ್ಧವಲ್ಲ; ಸಂಸ್ಥೆಯ ಕಾರ್ಯವೈಖರಿ, ಪಾರದರ್ಶಕತೆ ಹಾಗೂ ಅಧಿಕಾರದ ಬಳಕೆಯ ಕುರಿತು ಕೇಳಿಬರುತ್ತಿರುವ ಆರೋಪಗಳ ಬಗ್ಗೆ ಪರಿಶೀಲನೆ ನಡೆಯಬೇಕು ಎಂಬುದೇ ತಮ್ಮ ಉದ್ದೇಶ ಎಂದು ರಮೇಶ ಬಳೋಲಗಿಡದ ಸ್ಪಷ್ಟಪಡಿಸಿದರು.ಅಕ್ಟೋಬರ್ 4ರಂದು ಜಮಖಂಡಿಯ ಬಸವ ಭವನದಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಕಪ್ಪು ಬಾವುಟ ಪ್ರದರ್ಶಿಸಿ ಪ್ರತಿಭಟನೆ ನಡೆಸುವುದಾಗಿ ಮುಖಂಡರು ಎಚ್ಚರಿಕೆ ನೀಡಿದರು.

# ಕರ್ನಾಟಕ ಧಮ್ಮ ಜನಜಾಗೃತಿ ಯಾತ್ರೆ: ಸನ್ನತಿಯಲ್ಲಿ 5 ಲಕ್ಷ ಜನರಿಗೆ ಬೌದ್ಧ ಧಮ್ಮ ದೀಕ್ಷೆ

**ಯಾದಗಿರಿ:** ಸಂವಿಧಾನ ಆಧಾರಿತ ಪ್ರಬುದ್ಧ ಭಾರತ ನಿರ್ಮಾಣದ ಉದ್ದೇಶದಿಂದ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ಬೌದ್ಧ ಧಮ್ಮದ ಸಂಕಲ್ಪವನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಕರ್ನಾಟಕ ಧಮ್ಮ ಜನಜಾಗೃತಿ ಯಾತ್ರೆ ಆಯೋಜಿಸಲಾಗಿದೆ ಎಂದು ನಗರಸಭೆ ಮಾಜಿ ಸದಸ್ಯ ಹಾಗೂ ಡಿಎಸ್‌ಎಸ್ ಮುಖಂಡ ಮರೆಪ್ಪ ಚಟ್ಟೆರಕರ್ ತಿಳಿಸಿದರು. ಊಙಣಡಿಥಿ



ನಗರದ ಪತ್ರಿಕಾ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂತರಾಷ್ಟ್ರೀಯ ಬೌದ್ಧ ಯುವ ಸಂಘಟನೆ ಇಂಡಿಯಾ, ಗ್ಲೋಬಲ್ ಡಾ. ಅಂಬೇಡ್ಕರ್ ಬೌದ್ಧ ಮಿಷನ್, ಯುಎಸ್‌ಎ, ಅಖಿಲ ಭಾರತ ಡಾ. ಅಂಬೇಡ್ಕರ್ ಭಿಕ್ಕು ಸಂಘ ಹಾಗೂ ಬೌದ್ಧ ಮಹಾಸ್ತೂಪ ಅಭಿವೃದ್ಧಿ ಮತ್ತು ಸಂರಕ್ಷಣಾ ಸಂಸ್ಥೆ, ಸನ್ನತಿ (ಕನಗನಹಳ್ಳಿ) ಇವರ ಸಂಯುಕ್ತಾಶ್ರಯದಲ್ಲಿ ಕರ್ನಾಟಕ ಧಮ್ಮ ಜನಜಾಗೃತಿ ಯಾತ್ರೆ-2026 ಹಮ್ಮಿಕೊಳ್ಳಲಾಗಿದೆ ಎಂದರು.

ಕಲಬುರಗಿ ನಗರದ ಜಗತ್ ವೃತ್ತದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆಯಿಂದ ಅ.5ರಂದು ಬೆಳಿಗ್ಗೆ 10.30ಕ್ಕೆ ಯಾತ್ರೆಗೆ ಚಾಲನೆ ನೀಡಲಾಗುವುದು. ವಿವಿಧ ಜಿಲ್ಲೆಗಳ ಮೂಲಕ ಸಾಗುವ ಯಾತ್ರೆ ನ.1ರಂದು ಬೆಳಿಗ್ಗೆ 11 ಗಂಟೆಗೆ ಸನ್ನತಿಯ ಪ್ರಾಚೀನ ಸಾಮ್ರಾಟ್ ಅಶೋಕ ಸ್ತೂಪದ ಆವರಣದಲ್ಲಿ ಸಮಾರೋಪಗೊಳ್ಳಲಿದೆ ಎಂದು ತಿಳಿಸಿದರು.

ನ.1ರಂದು ಸನ್ನತಿಯಲ್ಲಿ ನಡೆಯಲಿರುವ ಬೃಹತ್ ಸಮಾರಂಭದಲ್ಲಿ ಸುಮಾರು 5 ಲಕ್ಷ ಉಪಾಸಕ-ಉಪಾಸಿಕೆಯರು ಬೌದ್ಧ ಧಮ್ಮ ದೀಕ್ಷೆ ಸ್ವೀಕರಿಸುವ ಉದ್ದೇಶ ಹೊಂದಲಾಗಿದೆ. ಇದು ಬೌದ್ಧ ಧಮ್ಮದ ಇತಿಹಾಸದಲ್ಲಿ ಮಹತ್ವದ ಕಾರ್ಯಕ್ರಮವಾಗಲಿದೆ ಎಂದು ಅವರು ಹೇಳಿದರು.ಭಾರತ ಸಂವಿಧಾನವನ್ನು ಅಂಗೀಕರಿಸಿ 76 ವರ್ಷಗಳು ಪೂರ್ಣಗೊಂಡಿದ್ದು, ಸಂವಿಧಾನದ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಸಮಾನತೆ, ಸ್ವಾತಂತ್ರ್ಯ, ನ್ಯಾಯ ಮತ್ತು ಬಂಧುತ್ವದಂತಹ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿದ್ದಾರೆ. ಇದೇ ಮೌಲ್ಯಗಳನ್ನು ಸಮಾಜದಲ್ಲಿ ಮತ್ತಷ್ಟು ಬಲಪಡಿಸುವ ಅಗತ್ಯವಿದೆ ಎಂದು ಮರೆಪ್ಪ ಚಟ್ಟೆರಕರ್ ಹೇಳಿದರು.

ತಥಾಗತ ಭಗವಾನ್ ಬುದ್ಧರ ಕಾಲದಿಂದ ಸಾಮ್ರಾಟ್ ಅಶೋಕ ಸೇರಿದಂತೆ ಹಲವು ಬೌದ್ಧ ರಾಜರು ಧಮ್ಮದ ಮಾನವೀಯ ತತ್ವಗಳ ಆಧಾರದ ಮೇಲೆ ಆಡಳಿತ ನಡೆಸಿದ್ದಾರೆ. ಸಮಾನತೆ, ನ್ಯಾಯ ಮತ್ತು ಕರುಣೆಯ ಮೌಲ್ಯಗಳನ್ನು ಸಮಾಜದಲ್ಲಿ ಪುನಃ ಸ್ಥಾಪಿಸುವ ಉದ್ದೇಶದಿಂದ ಧಮ್ಮ ಜನಜಾಗೃತಿ ಯಾತ್ರೆ ನಡೆಸಲಾಗುತ್ತಿದೆ ಎಂದರು.1956ರ ಅ.14ರಂದು ನಾಗಪುರದ ದೀಕ್ಷಾಭೂಮಿಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಬೌದ್ಧ ಧಮ್ಮವನ್ನು ಸ್ವೀಕರಿಸಿ, ಪ್ರಬುದ್ಧ ಭಾರತದ ನಿರ್ಮಾಣದ ಮಹತ್ವದ ಸಂದೇಶವನ್ನು ನೀಡಿದ್ದರು. ಆ ಸಂಕಲ್ಪವನ್ನು ಮುಂದುವರಿಸುವ ನಿಟ್ಟಿನಲ್ಲಿ ಕರ್ನಾಟಕದಾದ್ಯಂತ ಧಮ್ಮ ಜನಜಾಗೃತಿ ಮೂಡಿಸುವ ಕಾರ್ಯ ಕೈಗೊಳ್ಳಲಾಗಿದೆ ಎಂದು ಹೇಳಿದರು.ಐತಿಹಾಸಿಕ ಸನ್ನತಿ-ಕನಗನಹಳ್ಳಿ ಪ್ರದೇಶವು ಕರ್ನಾಟಕ ಮಾತ್ರವಲ್ಲದೆ ದೇಶದ ಅಮೂಲ್ಯ ಬೌದ್ಧ ಪರಂಪರೆಯ ಪ್ರಮುಖ ತಾಣವಾಗಿದೆ. ಇಲ್ಲಿನ ಬೌದ್ಧ ಸ್ಮಾರಕಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸಬೇಕು ಎಂದು ಅವರು ಮನವಿ ಮಾಡಿದರು. ಅಂಬೇಡ್ಕರ್‌ವಾದಿಗಳು, ಬೌದ್ಧ ಅನುಯಾಯಿಗಳು, ಭಿಕ್ಕು ಸಂಘ, ಉಪಾಸಕ-ಉಪಾಸಿಕಾ ಸಂಘಗಳು, ಸಾಮಾಜಿಕ ಮತ್ತು ರಾಜಕೀಯ ಮುಖಂಡರು, ಪರಿಶಿಷ್ಟ ಜಾತಿ-ಪಂಗಡಗಳು, ಇತರೆ ಹಿಂದುಳಿದ ವರ್ಗಗಳು ಸೇರಿದಂತೆ ಎಲ್ಲ ಬಹುಜನ ಸಂಘಟನೆಗಳು ಈ ಐತಿಹಾಸಿಕ ಅಭಿಯಾನಕ್ಕೆ ಸಹಕಾರ ನೀಡಬೇಕು.

ತಮ್ಮ ಕೈಲಾದ ರೀತಿಯಲ್ಲಿ ಸಹಾಯ ಮಾಡಿ, ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಶರಣು ನಟೆಕಾರ್, ಗೋಪಾಲ್ ತಳಿಗೇರಿ, ಭಗವಾನ್ ಅನವಾರ್, ಬಾಬಾರಾವ್ ಕಾಡ್ಲೂರು, ಸೈದಪ್ಪ ಕುಲೂರಕರ್, ಕಾಶೀನಾಥ್ ನಟೆಕಾರ್, ತಿಪ್ಪಣ್ಣ ಲಿಂಗನಕರ್, ನಿಂಗಪ್ಪ ಬಿರ್ನಾಳ, ಹೊನಪ್ಪ ನಟೆಕಾರ್, ಸರ್ವೋದಯ ಶಿವಪುತ್ರ, ಭೀಮಪ್ಪ ಕಾಗೆ, ಚಂದ್ರಕಾಂತ್ ಚಲವಾದಿ, ಶಂಕರ್ ಕೊಂಡೆ ಹಾಗೂ ಭೀಮರಾಯ ಹೊಸಮನಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ವಿಶ್ವ ಪ್ರಾಣಿ ದಿನ: ಜೀವಜಗತ್ತಿನ ಸಂರಕ್ಷಣೆಯೇ ಮಾನವ ಬದುಕಿನ ಭದ್ರತೆ



ಭೂಮಿ ಮನುಷ್ಯನೊಬ್ಬನಿಗೆ ಮಾತ್ರ ಸೇರಿದ್ದಲ್ಲ. ಈ ವಿಶಾಲವಾದ ಭೂಮಿಯ ಮೇಲೆ ಮನುಷ್ಯರ ಜೊತೆಗೆ ಕೋಟ್ಯಂತರ ಪ್ರಾಣಿ, ಪಕ್ಷಿ, ಕೀಟ, ಸರೀಸೃಪ, ಜಲಚರ ಮತ್ತು ಅಸಂಖ್ಯಾತ ಜೀವಿಗಳು ತಮ್ಮದೇ ಆದ ರೀತಿಯಲ್ಲಿ ಬದುಕುತ್ತಿವೆ. ಪ್ರಕೃತಿಯ ಪ್ರತಿಯೊಂದು ಜೀವಿಯೂ ಪರಿಸರ ವ್ಯವಸ್ಥೆಯಲ್ಲಿ ಒಂದು ನಿರ್ದಿಷ್ಟ ಪಾತ್ರವನ್ನು ನಿರ್ವಹಿಸುತ್ತದೆ. ಕೆಲವೊಂದು ಜೀವಿಗಳು ಸಸ್ಯಗಳ ಪರಾಗಸ್ಪರ್ಶಕ್ಕೆ ನೆರವಾಗುತ್ತವೆ, ಕೆಲವು ಬೀಜಗಳನ್ನು ಹರಡುತ್ತವೆ, ಇನ್ನೂ ಕೆಲವು ಆಹಾರ ಸರಪಳಿಯನ್ನು ಸಮತೋಲನದಲ್ಲಿಡುತ್ತವೆ. ಹೀಗಾಗಿ ಪ್ರಾಣಿಗಳ ಅಸ್ತಿತ್ವವು ಕೇವಲ ಪ್ರಕೃತಿಯ ಸೌಂದರ್ಯಕ್ಕೆ ಸಂಬಂಧಿಸಿದ ವಿಷಯವಲ್ಲ; ಅದು ಪರಿಸರ ಸಮತೋಲನ, ಕೃಷಿ, ಆಹಾರ ಭದ್ರತೆ ಮತ್ತು ಮಾನವನ ಭವಿಷ್ಯದೊಂದಿಗೆ ನೇರವಾಗಿ ಸಂಬಂಧ ಹೊಂದಿದೆ. ಪ್ರಾಣಿಗಳ ಮೇಲಿನ ಕಾಳಜಿ, ಅವುಗಳ ರಕ್ಷಣೆ ಮತ್ತು ಜೀವಜಗತ್ತಿನ ಸಂರಕ್ಷಣೆಯ ಮಹತ್ವವನ್ನು ಜನರಲ್ಲಿ ಮೂಡಿಸುವ ಉದ್ದೇಶದಿಂದ ಪ್ರತಿವರ್ಷ ಅಕ್ಟೋಬರ್ 4ರಂದು ವಿಶ್ವ ಪ್ರಾಣಿ ದಿನವನ್ನು ಆಚರಿಸಲಾಗುತ್ತದೆ.

ವಿಶ್ವ ಪ್ರಾಣಿ ದಿನವು ಪ್ರಾಣಿಗಳ ಹಕ್ಕುಗಳು, ಕಲ್ಯಾಣ ಮತ್ತು ಸಂರಕ್ಷಣೆಯ ಕುರಿತು ಸಮಾಜದಲ್ಲಿ ಜಾಗೃತಿ ಮೂಡಿಸುವ ಪ್ರಮುಖ ಸಂದರ್ಭವಾಗಿದೆ. ಪ್ರಾಣಿಗಳು ಮಾತನಾಡಲು ಸಾಧ್ಯವಿಲ್ಲ ಎಂಬ ಕಾರಣಕ್ಕೆ ಅವುಗಳ ನೋವು ಕಡಿಮೆಯಾಗುವುದಿಲ್ಲ. ಅವುಗಳಿಗೂ ಹಸಿವು, ಬಾಯಾರಿಕೆ, ನೋವು, ಭಯ, ಸಂತೋಷ ಮತ್ತು ಬದುಕುವ ಸಹಜ ಪ್ರವೃತ್ತಿ ಇದೆ. ಮನುಷ್ಯ ತನ್ನ ಬುದ್ಧಿವಂತಿಕೆ ಮತ್ತು ತಂತ್ರಜ್ಞಾನದಿಂದ ಪ್ರಕೃತಿಯ ಮೇಲೆ ಹೆಚ್ಚಿನ ಪ್ರಭಾವ ಬೀರುವ ಸಾಮರ್ಥ್ಯವನ್ನು ಪಡೆದಿದ್ದಾನೆ. ಈ ಸಾಮರ್ಥ್ಯವನ್ನು ದುರ್ಬಲ ಜೀವಿಗಳ ಮೇಲೆ ದೌರ್ಜನ್ಯ ನಡೆಸಲು ಬಳಸುವುದಕ್ಕಿಂತ ಅವುಗಳ ಸಂರಕ್ಷಣೆಗೆ ಬಳಸುವುದು ನಿಜವಾದ ಮಾನವೀಯತೆಯಾಗಿದೆ.

ಪ್ರಕೃತಿಯ ಪ್ರತಿಯೊಂದು ಜೀವಿಗೂ ಮಹತ್ವವಿದೆ

ಪ್ರಕೃತಿಯಲ್ಲಿ ದೊಡ್ಡ ಪ್ರಾಣಿಗಳಿಗಷ್ಟೇ ಮಹತ್ವವಿದೆ ಎಂದು ಭಾವಿಸುವುದು ತಪ್ಪು. ಒಂದು ಸಣ್ಣ ಕೀಟದಿಂದ ಹಿಡಿದು ಬೃಹತ್ ಆನೆಯವರೆಗೆ ಪ್ರತಿಯೊಂದು ಜೀವಿಯೂ ಪರಿಸರ ವ್ಯವಸ್ಥೆಯ ಒಂದು ಭಾಗವಾಗಿದೆ. ಜೇನುನೊಣಗಳು ಮತ್ತು ಚಿಟ್ಟೆಗಳು ಹೂವಿನಿಂದ ಹೂವಿಗೆ ಪರಾಗವನ್ನು ಸಾಗಿಸುವ ಮೂಲಕ ಸಸ್ಯಗಳ ಸಂತಾನೋತ್ಪತ್ತಿಗೆ ನೆರವಾಗುತ್ತವೆ. ಪಕ್ಷಿಗಳು ಹಣ್ಣುಗಳನ್ನು ತಿಂದು ಅವುಗಳ ಬೀಜಗಳನ್ನು ದೂರದ ಪ್ರದೇಶಗಳಿಗೆ ಹರಡುತ್ತವೆ. ಕೆಲವು ಪ್ರಾಣಿಗಳು ಸತ್ತ ಜೀವಿಗಳ ಅವಶೇಷಗಳನ್ನು ಪರಿಸರದಿಂದ ತೆಗೆದುಹಾಕುವ ಮೂಲಕ ನೈಸರ್ಗಿಕ ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಳ್ಳುತ್ತವೆ.

ಕಾಡಿನಲ್ಲಿ ಹುಲಿ, ಚಿರತೆ, ಸಿಂಹ ಮುಂತಾದ ಮಾಂಸಾಹಾರಿ ಪ್ರಾಣಿಗಳು ಆಹಾರ ಸರಪಳಿಯ ಮೇಲ್ದರ್ಜೆಯಲ್ಲಿದ್ದು, ಇತರ ಪ್ರಾಣಿಗಳ ಸಂಖ್ಯೆಯನ್ನು ನೈಸರ್ಗಿಕವಾಗಿ ನಿಯಂತ್ರಿಸುತ್ತವೆ. ಜಿಂಕೆ, ಕಾಡೆಮ್ಮೆ, ಕಾಡುಹಂದಿ ಮುಂತಾದ ಸಸ್ಯಾಹಾರಿ ಪ್ರಾಣಿಗಳು ಸಸ್ಯವರ್ಗದೊಂದಿಗೆ ಸಂಬಂಧ ಹೊಂದಿವೆ. ಒಂದು ಜೀವಿಯ ಸಂಖ್ಯೆ ಅಸಹಜವಾಗಿ ಹೆಚ್ಚಾದರೆ ಅಥವಾ ಸಂಪೂರ್ಣವಾಗಿ ಕಡಿಮೆಯಾದರೆ ಅದರ ಪರಿಣಾಮ ಇತರ ಜೀವಿಗಳ ಮೇಲೂ ಬೀಳುತ್ತದೆ. ಹೀಗಾಗಿ ಪರಿಸರ ಸಮತೋಲನವನ್ನು ಕಾಪಾಡಲು ಜೀವವೈವಿಧ್ಯತೆಯನ್ನು ಉಳಿಸುವುದು ಅತ್ಯಂತ ಅಗತ್ಯವಾಗಿದೆ.

ಮಾನವನ ಬದುಕಿನೊಂದಿಗೆ ಪ್ರಾಣಿಗಳ ಅವಿನಾಭಾವ ಸಂಬಂಧ

ಮನುಷ್ಯನ ನಾಗರಿಕತೆಯ ಬೆಳವಣಿಗೆಯ ಇತಿಹಾಸವನ್ನು ಗಮನಿಸಿದರೆ ಪ್ರಾಣಿಗಳ ಪಾತ್ರ ಬಹಳ ದೊಡ್ಡದು. ಕೃಷಿ ಆಧಾರಿತ ಸಮಾಜಗಳಲ್ಲಿ ಎತ್ತು, ಎಮ್ಮೆ, ಹಸು, ಕುದುರೆ ಸೇರಿದಂತೆ ಅನೇಕ ಪ್ರಾಣಿಗಳು ಮಾನವನ ದೈನಂದಿನ ಜೀವನದ ಭಾಗವಾಗಿದ್ದವು. ಹಾಲು, ಮೊಟ್ಟೆ, ಉಣ್ಣೆ ಸೇರಿದಂತೆ ಹಲವು ಉತ್ಪನ್ನಗಳು ಗ್ರಾಮೀಣ ಆರ್ಥಿಕತೆಯಲ್ಲಿ ಪ್ರಮುಖ ಸ್ಥಾನ ಪಡೆದಿವೆ.

ಇಂದಿನ ಆಧುನಿಕ ಯುಗದಲ್ಲಿಯೂ ಸಾಕುಪ್ರಾಣಿಗಳು ಮಾನವನ ಜೀವನದಲ್ಲಿ ವಿಶೇಷ ಸ್ಥಾನ ಹೊಂದಿವೆ. ನಾಯಿಗಳು ಮನೆ ಮತ್ತು ಆಸ್ತಿಯ ರಕ್ಷಣೆಯಲ್ಲಿ ನೆರವಾಗುವುದರ ಜೊತೆಗೆ ಅನೇಕ ಕುಟುಂಬಗಳಲ್ಲಿ ಪ್ರೀತಿಯ ಸಂಗಾತಿಗಳಾಗಿವೆ. ಬೆಕ್ಕುಗಳು ಕೂಡ ಅನೇಕ ಮನೆಗಳ ಸದಸ್ಯರಂತೆಯೇ ಬೆಳೆಸಲ್ಪಡುತ್ತವೆ. ಕೆಲವು ಪ್ರಾಣಿಗಳು ಪೊಲೀಸ್, ರಕ್ಷಣಾ ಮತ್ತು ಪತ್ತೆ ಕಾರ್ಯಗಳಲ್ಲಿಯೂ ತರಬೇತಿ ಪಡೆದು ಮಾನವನಿಗೆ ನೆರವಾಗುತ್ತವೆ.

ಆದರೆ ಪ್ರಾಣಿಗಳಿಂದ ಮಾನವನಿಗೆ ಪ್ರಯೋಜನವಿದೆ ಎಂಬ ಕಾರಣಕ್ಕಷ್ಟೇ ಅವುಗಳನ್ನು ರಕ್ಷಿಸಬೇಕು ಎಂಬ ಮನೋಭಾವ ಸರಿಯಲ್ಲ. ಅವುಗಳಿಗೂ ಸ್ವತಂತ್ರವಾಗಿ ಬದುಕುವ ಸಹಜ ಹಕ್ಕು ಮತ್ತು ಪರಿಸರದಲ್ಲಿ ತಮ್ಮದೇ ಆದ ಸ್ಥಾನವಿದೆ. ಆದ್ದರಿಂದ ಪ್ರಾಣಿಗಳ ಸಂರಕ್ಷಣೆಯ ಮೂಲ ಉದ್ದೇಶ ಅವುಗಳನ್ನು ಕೇವಲ ಮಾನವನ ಉಪಯೋಗದ ವಸ್ತುವಾಗಿ ನೋಡುವುದಲ್ಲ, ಜೀವಿಗಳಾಗಿ ಗೌರವಿಸುವುದಾಗಿದೆ.

ಅರಣ್ಯ ನಾಶದಿಂದ ಕಾಡುಪ್ರಾಣಿಗಳಿಗೆ ಸಂಕಷ್ಟ

ಇತ್ತೀಚಿನ ದಶಕಗಳಲ್ಲಿ ವೇಗವಾಗಿ ನಡೆಯುತ್ತಿರುವ ನಗರೀಕರಣ, ಕೈಗಾರಿಕೀಕರಣ, ರಸ್ತೆ ಮತ್ತು ರೈಲು ಮಾರ್ಗಗಳ ವಿಸ್ತರಣೆ, ಅರಣ್ಯ ಪ್ರದೇಶಗಳ ಪರಿವರ್ತನೆ ಹಾಗೂ ವಿವಿಧ ಮಾನವ ಚಟುವಟಿಕೆಗಳಿಂದ ಅನೇಕ ವನ್ಯಜೀವಿಗಳ ವಾಸಸ್ಥಾನಗಳು ಒತ್ತಡಕ್ಕೆ ಒಳಗಾಗಿವೆ. ಕಾಡು ಕಡಿಮೆಯಾದಾಗ ಪ್ರಾಣಿಗಳಿಗೆ ಆಹಾರ ಮತ್ತು ನೀರಿನ ಲಭ್ಯತೆ ಕುಗ್ಗಬಹುದು. ಇದರಿಂದ ಅವು ಮಾನವ ವಸತಿ ಪ್ರದೇಶಗಳತ್ತ ಬರುವ ಸಾಧ್ಯತೆ ಹೆಚ್ಚುತ್ತದೆ.

ವಿಶೇಷವಾಗಿ ಆನೆ, ಚಿರತೆ, ಕರಡಿ, ಕಾಡುಹಂದಿ ಮುಂತಾದ ಪ್ರಾಣಿಗಳು ಆಹಾರ ಅಥವಾ ನೀರಿನ ಹುಡುಕಾಟದಲ್ಲಿ ಕೃಷಿ ಪ್ರದೇಶಗಳಿಗೆ ಪ್ರವೇಶಿಸುವ ಸಂದರ್ಭಗಳು ಕಂಡುಬರುತ್ತವೆ. ಇದರಿಂದ ರೈತರಿಗೆ ಬೆಳೆ ನಷ್ಟವಾಗಬಹುದು ಮತ್ತು ಮತ್ತೊಂದೆಡೆ ಪ್ರಾಣಿಗಳಿಗೂ ಅಪಾಯ ಎದುರಾಗಬಹುದು. ಇಂತಹ ಘಟನೆಗಳನ್ನು ಕೇವಲ ಪ್ರಾಣಿ□ಮಾನವ ಸಂಘರ್ಷವೆಂದು ನೋಡುವುದಕ್ಕಿಂತ ಅದರ ಹಿಂದಿರುವ ಪರಿಸರ ಮತ್ತು ವಾಸಸ್ಥಾನ ಸಂಬಂಧಿತ ಕಾರಣಗಳನ್ನು ಅರ್ಥಮಾಡಿಕೊಳ್ಳಬೇಕು.

ಮಾನವ□ವನ್ಯಜೀವಿ ಸಂಘರ್ಷಕ್ಕೆ ಪರಿಹಾರ ಅಗತ್ಯ

ಮಾನವ ವಸತಿ ಪ್ರದೇಶಗಳು ವಿಸ್ತರಿಸುತ್ತಿರುವ ಸಂದರ್ಭದಲ್ಲಿ ವನ್ಯಜೀವಿಗಳ ಸಂಚಾರ ಮಾರ್ಗಗಳು ಅಡ್ಡಿಯಾಗದಂತೆ ಯೋಜನೆ ರೂಪಿಸುವುದು ಮುಖ್ಯವಾಗಿದೆ. ಕಾಡು ಪ್ರದೇಶಗಳ ನಡುವೆ ಸಂಪರ್ಕ ಕಲ್ಪಿಸುವ ನೈಸರ್ಗಿಕ ವನ್ಯಜೀವಿ ಮಾರ್ಗಗಳನ್ನು ಸಂರಕ್ಷಿಸುವುದು, ನೀರಿನ ಮೂಲಗಳನ್ನು ಉಳಿಸುವುದು ಮತ್ತು ಅಗತ್ಯವಿರುವ ಕಡೆ ಸೂಕ್ತ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದು ಸಂಘರ್ಷವನ್ನು ಕಡಿಮೆ ಮಾಡಲು ನೆರವಾಗಬಹುದು.

ರಸ್ತೆಗಳಲ್ಲಿ ವಾಹನಗಳ ವೇಗ ನಿಯಂತ್ರಣ, ವನ್ಯಜೀವಿಗಳ ಸಂಚಾರವಿರುವ ಪ್ರದೇಶಗಳಲ್ಲಿ ಎಚ್ಚರಿಕೆ, ಸೂಕ್ತ ಸೂಚನಾ ಫಲಕಗಳು ಮತ್ತು ಅಗತ್ಯವಿರುವಲ್ಲಿ ಸುರಕ್ಷಿತ ದಾಟುವ ಮಾರ್ಗಗಳ ವ್ಯವಸ್ಥೆ ಮುಂತಾದ ಕ್ರಮಗಳು ಸಹಾಯಕವಾಗಬಹುದು. ಸ್ಥಳೀಯ ಜನರು, ಅರಣ್ಯ ಇಲಾಖೆ ಮತ್ತು ಆಡಳಿತ ವ್ಯವಸ್ಥೆ ಪರಸ್ಪರ ಸಹಕಾರದಿಂದ ಕಾರ್ಯನಿರ್ವಹಿಸಿದಾಗ ಮಾತ್ರ ಇಂತಹ ಸಮಸ್ಯೆಗಳಿಗೆ ದೀರ್ಘಕಾಲೀನ ಪರಿಹಾರ ಕಂಡುಕೊಳ್ಳಲು ಸಾಧ್ಯ.

ಬೀದಿ ಪ್ರಾಣಿಗಳ ಬದುಕೂ ನಮ್ಮ ಗಮನಕ್ಕೆ ಬರಬೇಕು

ನಗರಗಳು ಮತ್ತು ಪಟ್ಟಣಗಳಲ್ಲಿ ಬೀದಿ ನಾಯಿಗಳು, ಬೆಕ್ಕುಗಳು ಹಾಗೂ ಇತರ ಪ್ರಾಣಿಗಳು ಮಾನವರೊಂದಿಗೆ ಸಹಬಾಳ್ವೆ ನಡೆಸುತ್ತಿವೆ. ಆಹಾರ, ನೀರು, ಆಶ್ರಯ ಮತ್ತು ಆರೋಗ್ಯದ ಸಮಸ್ಯೆಗಳು ಇವುಗಳನ್ನು ಕಾಡುತ್ತವೆ. ಕೆಲವೊಮ್ಮೆ ವಾಹನ ಅಪಘಾತಗಳಲ್ಲಿ ಪ್ರಾಣಿಗಳು ಗಾಯಗೊಳ್ಳುತ್ತವೆ. ಕೆಲವು ಸಂದರ್ಭಗಳಲ್ಲಿ ಅವುಗಳ ಮೇಲೆ ಮಾನವರಿಂದಲೇ ಹಿಂಸೆ ನಡೆಯುತ್ತದೆ.

ಸಾಕುಪ್ರಾಣಿಗಳನ್ನು ಮನೆಗೆ ತರುವವರು ಅವುಗಳ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಪ್ರಾಣಿಯನ್ನು ಸಾಕಲು ಸಾಧ್ಯವಿಲ್ಲದ ಸಂದರ್ಭದಲ್ಲಿ ಅದನ್ನು ರಸ್ತೆಗೆ ಬಿಟ್ಟುಬಿಡುವುದು ಸಮಸ್ಯೆಯನ್ನು ಹೆಚ್ಚಿಸುತ್ತದೆ. ಪ್ರಾಣಿಗಳ ಆರೋಗ್ಯ, ಲಸಿಕೆ, ಸಂತಾನ ನಿಯಂತ್ರಣ, ಆಹಾರ ಮತ್ತು ಸ್ವಚ್ಛತೆ ಕುರಿತು ಜವಾಬ್ದಾರಿಯುತವಾಗಿ ನಡೆದುಕೊಳ್ಳುವುದು ಅಗತ್ಯ.

ಗಾಯಗೊಂಡ ಪ್ರಾಣಿ ಕಂಡುಬಂದರೆ ಅದನ್ನು ಹೊಡೆಯುವುದು ಅಥವಾ ಓಡಿಸುವುದಕ್ಕಿಂತ ಸಂಬಂಧಪಟ್ಟ ಪಶುವೈದ್ಯರು ಅಥವಾ ಪ್ರಾಣಿ ರಕ್ಷಣಾ ಸಂಸ್ಥೆಯ ನೆರವು ಪಡೆಯುವುದು ಸೂಕ್ತ. ಸಮಾಜದಲ್ಲಿ ಇಂತಹ ಮಾನವೀಯ ಮನೋಭಾವ ಬೆಳೆದರೆ ಅನೇಕ ಪ್ರಾಣಿಗಳ ಜೀವ ಉಳಿಸಬಹುದು.

ಮಕ್ಕಳಲ್ಲಿ ಬಾಲ್ಯದಿಂದಲೇ ಕರುಣೆ ಬೆಳೆಸಬೇಕು

ಪ್ರಾಣಿಗಳ ಮೇಲಿನ ಪ್ರೀತಿ ಮತ್ತು ಕಾಳಜಿ ಬಾಲ್ಯದಿಂದಲೇ ಬೆಳೆಸಬಹುದಾದ ಮೌಲ್ಯವಾಗಿದೆ. ಶಾಲೆಗಳಲ್ಲಿ ಪರಿಸರ ಶಿಕ್ಷಣದ ಭಾಗವಾಗಿ ಪ್ರಾಣಿಗಳ ಸಂರಕ್ಷಣೆಯ ಕುರಿತು ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡಬೇಕು. ಪ್ರಾಣಿಗಳನ್ನು ಕಲ್ಲಿನಿಂದ ಹೊಡೆಯುವುದು, ಅವುಗಳಿಗೆ ಕಿರುಕುಳ ನೀಡುವುದು ಅಥವಾ ಅವುಗಳನ್ನು ಅನಗತ್ಯವಾಗಿ ಭಯಪಡಿಸುವುದು ತಪ್ಪು ಎಂಬುದನ್ನು ಮಕ್ಕಳಿಗೆ ತಿಳಿಸಬೇಕು.

ಬೇಸಿಗೆಯ ದಿನಗಳಲ್ಲಿ ಮನೆ ಅಥವಾ ಶಾಲೆಯ ಆವರಣದಲ್ಲಿ ಪಕ್ಷಿಗಳಿಗೆ ನೀರು ಇಡುವುದು, ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಡುವುದು, ಪ್ಲಾಸ್ಟಿಕ್ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಎಸೆಯದಿರುವುದು ಮುಂತಾದ ಸರಳ ಕ್ರಮಗಳ ಮೂಲಕ ಮಕ್ಕಳು ಪರಿಸರ ಸ್ನೇಹಿ ಜೀವನಶೈಲಿಯನ್ನು ಕಲಿಯಬಹುದು.

ಮಕ್ಕಳಿಗೆ ಪ್ರಾಣಿಗಳ ಬಗ್ಗೆ ಕೇವಲ ಭಾವನಾತ್ಮಕ ಪ್ರೀತಿ ಮಾತ್ರವಲ್ಲ, ವೈಜ್ಞಾನಿಕ ಅರಿವು ಕೂಡ ಅಗತ್ಯ. ಯಾವ ಪ್ರಾಣಿ ಎಲ್ಲಿ ವಾಸಿಸುತ್ತದೆ? ಅದರ ಆಹಾರವೇನು? ಅದು ಪರಿಸರದಲ್ಲಿ ಯಾವ ಪಾತ್ರ ವಹಿಸುತ್ತದೆ? ಅದರ ವಾಸಸ್ಥಾನಕ್ಕೆ ಯಾವ ರೀತಿಯ ಅಪಾಯಗಳಿವೆ? ಇಂತಹ ಪ್ರಶ್ನೆಗಳ ಮೂಲಕ ವಿದ್ಯಾರ್ಥಿಗಳಲ್ಲಿ ಪರಿಸರದ ಬಗ್ಗೆ ಆಸಕ್ತಿ ಬೆಳೆಸಬಹುದು.

ಜೀವವೈವಿಧ್ಯತೆ ಉಳಿಸುವುದು ಏಕೆ ಮುಖ್ಯ?

ಒಂದು ಪ್ರದೇಶದಲ್ಲಿ ವಿವಿಧ ರೀತಿಯ ಜೀವಿಗಳು ಇರುವುದನ್ನು ಜೀವವೈವಿಧ್ಯತೆ ಎಂದು ಕರೆಯಲಾಗುತ್ತದೆ. ಜೀವವೈವಿಧ್ಯತೆ ಪರಿಸರ ವ್ಯವಸ್ಥೆಯ ಸ್ಥಿರತೆಗೆ ಪ್ರಮುಖವಾಗಿದೆ. ಕಾಡುಗಳಲ್ಲಿ ಸಸ್ಯಗಳು, ಪ್ರಾಣಿಗಳು, ಪಕ್ಷಿಗಳು, ಕೀಟಗಳು, ಸೂಕ್ಷ್ಮಜೀವಿಗಳು ಮತ್ತು ಇತರ ಜೀವಿಗಳು ಪರಸ್ಪರ ಅವಲಂಬಿತವಾಗಿವೆ.

ಒಂದು ಜೀವಿಯ ಅಸ್ತಿತ್ವಕ್ಕೆ ಅಪಾಯ ಬಂದಾಗ ಅದರ ಪರಿಣಾಮ ಆಹಾರ ಸರಪಳಿಯ ಮೂಲಕ ಇತರ ಜೀವಿಗಳ ಮೇಲೂ ಬೀಳಬಹುದು. ಆದ್ದರಿಂದ ಅಪರೂಪದ ಪ್ರಾಣಿಗಳನ್ನು ಮಾತ್ರವಲ್ಲದೆ ಸಾಮಾನ್ಯವಾಗಿ ಕಾಣುವ ಜೀವಿಗಳನ್ನೂ ಸಂರಕ್ಷಿಸುವುದು ಅಗತ್ಯ. ನಮ್ಮ ಸುತ್ತಮುತ್ತಲಿನ ಸಣ್ಣ ಪಕ್ಷಿಗಳು, ಚಿಟ್ಟೆಗಳು, ಜೇನುನೊಣಗಳು, ಕಪ್ಪೆಗಳು ಮತ್ತು ಇತರ ಜೀವಿಗಳ ಸಂಖ್ಯೆಯಲ್ಲಿನ ಬದಲಾವಣೆಗಳೂ ಪರಿಸರದ ಆರೋಗ್ಯದ ಸೂಚಕವಾಗಿರಬಹುದು.

ಅಕ್ರಮ ಬೇಟೆ ಮತ್ತು ವನ್ಯಜೀವಿ ವ್ಯಾಪಾರಕ್ಕೆ ಕಡಿವಾಣ ಅಗತ್ಯ

ವನ್ಯಜೀವಿಗಳಿಗೆ ಎದುರಾಗುವ ಪ್ರಮುಖ ಅಪಾಯಗಳಲ್ಲಿ ಅಕ್ರಮ ಬೇಟೆ ಮತ್ತು ಅಕ್ರಮ ವನ್ಯಜೀವಿ ವ್ಯಾಪಾರವೂ ಸೇರಿವೆ. ಕೆಲವು ಪ್ರಾಣಿಗಳ ದೇಹದ ಭಾಗಗಳಿಗೆ ಬೇಡಿಕೆ ಇರುವ ಕಾರಣ ಅವುಗಳನ್ನು ಅಕ್ರಮವಾಗಿ ಬೇಟೆಯಾಡಲಾಗುತ್ತದೆ. ಇಂತಹ ಚಟುವಟಿಕೆಗಳು ನಿರ್ದಿಷ್ಟ ಪ್ರಾಣಿಗಳ ಸಂಖ್ಯೆಯನ್ನು ಮಾತ್ರವಲ್ಲದೆ ಇಡೀ ಪರಿಸರ ವ್ಯವಸ್ಥೆಯನ್ನು ಹಾನಿಗೊಳಿಸಬಹುದು.

ವನ್ಯಜೀವಿ ಸಂರಕ್ಷಣೆಗೆ ಕಾನೂನುಗಳ ಜಾರಿಗೆ ಜೊತೆಗೆ ಸಾರ್ವಜನಿಕ ಜಾಗೃತಿಯೂ ಅಗತ್ಯ. ಅನುಮಾನಾಸ್ಪದ ವನ್ಯಜೀವಿ ವ್ಯಾಪಾರ ಅಥವಾ ಬೇಟೆಯ ಚಟುವಟಿಕೆ ಕಂಡುಬಂದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡುವುದು ನಾಗರಿಕರ ಜವಾಬ್ದಾರಿಯಾಗಿದೆ. ವನ್ಯಜೀವಿಗಳನ್ನು ಖರೀದಿಸುವುದು, ಮಾರಾಟ ಮಾಡುವುದು ಅಥವಾ ಅವುಗಳ ಅಕ್ರಮ ವ್ಯಾಪಾರಕ್ಕೆ ಉತ್ತೇಜನ ನೀಡುವುದು ಪರಿಸರಕ್ಕೆ ಗಂಭೀರ ಹಾನಿಯನ್ನುಂಟುಮಾಡುತ್ತದೆ.

ಹವಾಮಾನ ಬದಲಾವಣೆಯೂ ಜೀವಿಗಳ ಬದುಕಿನ ಮೇಲೆ ಪರಿಣಾಮ ಬೀರುತ್ತಿದೆ

ಹವಾಮಾನದಲ್ಲಿ ಉಂಟಾಗುತ್ತಿರುವ ಬದಲಾವಣೆಗಳು ಪ್ರಾಣಿಗಳ ಬದುಕಿನ ಮೇಲೂ ಪರಿಣಾಮ ಬೀರುತ್ತವೆ. ತಾಪಮಾನ ಏರಿಕೆ, ಮಳೆಯ ಮಾದರಿಯಲ್ಲಿ ಬದಲಾವಣೆ, ಬರಗಾಲ, ಪ್ರವಾಹ ಮತ್ತು ನೀರಿನ ಲಭ್ಯತೆಯಲ್ಲಿನ ವ್ಯತ್ಯಾಸಗಳು ಅನೇಕ ಜೀವಿಗಳ ವಾಸಸ್ಥಾನ ಮತ್ತು ಆಹಾರ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತವೆ.

ಕೆಲವು ಜೀವಿಗಳು ನಿರ್ದಿಷ್ಟ ಹವಾಮಾನ ಪರಿಸ್ಥಿತಿಗೆ ಹೊಂದಿಕೊಂಡಿರುತ್ತವೆ. ಪರಿಸರದಲ್ಲಿ ವೇಗವಾಗಿ ಬದಲಾವಣೆ ಸಂಭವಿಸಿದಾಗ ಅವುಗಳಿಗೆ ಹೊಂದಿಕೊಳ್ಳಲು ಕಷ್ಟವಾಗಬಹುದು. ಆದ್ದರಿಂದ ಹವಾಮಾನ ಬದಲಾವಣೆಯನ್ನು ಎದುರಿಸುವ ಕ್ರಮಗಳ ಜೊತೆಗೆ ಅರಣ್ಯ ಮತ್ತು ಜಲಮೂಲಗಳ ಸಂರಕ್ಷಣೆಯೂ ಮುಖ್ಯವಾಗಿದೆ.

ಪ್ರಾಣಿ ಸಂರಕ್ಷಣೆ ಮತ್ತು ಪರಿಸರ ಸಂರಕ್ಷಣೆ ಒಂದೇ ನಾಣ್ಯದ ಎರಡು ಮುಖಗಳು ಪ್ರಾಣಿಗಳನ್ನು ರಕ್ಷಿಸಲು ಅವುಗಳ ವಾಸಸ್ಥಾನವನ್ನು ರಕ್ಷಿಸಬೇಕು. ವಾಸಸ್ಥಾನವನ್ನು ರಕ್ಷಿಸಲು ಕಾಡು, ನೀರು, ಮಣ್ಣು ಮತ್ತು ಸಸ್ಯವರ್ಗವನ್ನು ಸಂರಕ್ಷಿಸಬೇಕು. ಹೀಗಾಗಿ ಪ್ರಾಣಿ ಸಂರಕ್ಷಣೆಯನ್ನು ಪರಿಸರ ಸಂರಕ್ಷಣೆಯಿಂದ ಬೇರ್ಪಡಿಸಲು ಸಾಧ್ಯವಿಲ್ಲ.

ಕಾಡು ಉಳಿದರೆ ಅನೇಕ ಜೀವಿಗಳಿಗೆ ಆಶ್ರಯ ದೊರೆಯುತ್ತದೆ. ಜಲಮೂಲಗಳು ಉಳಿದರೆ ಪ್ರಾಣಿಗಳು ಮತ್ತು ಪಕ್ಷಿಗಳಿಗೆ ನೀರು ದೊರೆಯುತ್ತದೆ. ಸಸ್ಯವರ್ಗ ಉಳಿದರೆ ಆಹಾರ ಸರಪಳಿ ಸ್ಥಿರವಾಗುತ್ತದೆ. ಪರಿಸರ ವ್ಯವಸ್ಥೆ ಆರೋಗ್ಯಕರವಾಗಿದ್ದರೆ ಮನುಷ್ಯನಿಗೂ ಉತ್ತಮ ಪರಿಸರ ದೊರೆಯುತ್ತದೆ.

ಪ್ರಾಣಿಗಳ ಸಂರಕ್ಷಣೆಯಲ್ಲಿ ತಂತ್ರಜ್ಞಾನದ ಪಾತ್ರ

ಇಂದಿನ ತಂತ್ರಜ್ಞಾನ ಯುಗದಲ್ಲಿ ಪ್ರಾಣಿಗಳ ಸಂರಕ್ಷಣೆಯಲ್ಲಿಯೂ ಆಧುನಿಕ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ಕ್ಯಾಮೆರಾ ಟ್ರ್ಯಾಪ್‌ಗಳು, ಉಪಗ್ರಹ ಆಧಾರಿತ ಮೇಲ್ವಿಚಾರಣೆ, ಜಿಪಿಎಸ್ ಆಧಾರಿತ ಟ್ರ್ಯಾಕಿಂಗ್, ಡಿಜಿಟಲ್ ದತ್ತಾಂಶ ಮತ್ತು ವೈಜ್ಞಾನಿಕ ಸಮೀಕ್ಷೆಗಳು ವನ್ಯಜೀವಿಗಳ ಚಲನವಲನ ಹಾಗೂ ಸಂಖ್ಯೆಯ ಅಧ್ಯಯನಕ್ಕೆ ನೆರವಾಗುತ್ತವೆ.

ತಂತ್ರಜ್ಞಾನವನ್ನು ಕೇವಲ ಮಾನವನ ಅನುಕೂಲಕ್ಕಾಗಿ ಬಳಸುವುದಕ್ಕಿಂತ ಪ್ರಕೃತಿ ಮತ್ತು ಜೀವಿಗಳ ಸಂರಕ್ಷಣೆಗೆ ಬಳಸಿದಾಗ ಅದರ ಸಾಮಾಜಿಕ ಮಹತ್ವ ಮತ್ತಷ್ಟು ಹೆಚ್ಚುತ್ತದೆ. ವಿಜ್ಞಾನಿಗಳು ಮತ್ತು ಅರಣ್ಯ ತಜ್ಞರು ಸಂಗ್ರಹಿಸುವ ಮಾಹಿತಿಯ ಆಧಾರದ ಮೇಲೆ ಸಂರಕ್ಷಣಾ ಯೋಜನೆಗಳನ್ನು ರೂಪಿಸಲು ಸಾಧ್ಯವಾಗುತ್ತದೆ.

ರೈತರು ಮತ್ತು ಗ್ರಾಮೀಣ ಸಮುದಾಯಗಳ ಪಾತ್ರ

ವನ್ಯಜೀವಿಗಳ ಸಂರಕ್ಷಣೆಯಲ್ಲಿ ಗ್ರಾಮೀಣ ಸಮುದಾಯಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಕಾಡಿನ ಅಂಚಿನಲ್ಲಿ ವಾಸಿಸುವ ಜನರು ವನ್ಯಜೀವಿಗಳ ಚಲನವಲನವನ್ನು ನೇರವಾಗಿ ಗಮನಿಸುತ್ತಾರೆ. ಆದ್ದರಿಂದ ಸ್ಥಳೀಯ ಸಮುದಾಯಗಳನ್ನು ಸಂರಕ್ಷಣಾ ಚಟುವಟಿಕೆಗಳಲ್ಲಿ ಒಳಗೊಳ್ಳುವುದು ಅಗತ್ಯ.

ರೈತರ ಬೆಳೆಗಳಿಗೆ ವನ್ಯಜೀವಿಗಳಿಂದ ಹಾನಿಯಾದಾಗ ಅವರ ಸಮಸ್ಯೆಗಳನ್ನೂ ಗಂಭೀರವಾಗಿ ಪರಿಗಣಿಸಬೇಕು. ಸಂರಕ್ಷಣೆಯ ಹೆಸರಿನಲ್ಲಿ ಸ್ಥಳೀಯ ಜನರ ಸಮಸ್ಯೆಗಳನ್ನು ನಿರ್ಲಕ್ಷಿಸುವುದರಿಂದ ಸಂಘರ್ಷ ಹೆಚ್ಚಾಗಬಹುದು. ಪರಿಸರ ಸಂರಕ್ಷಣೆ ಮತ್ತು ಜನರ ಜೀವನೋಪಾಯ ಎರಡನ್ನೂ ಸಮತೋಲನಗೊಳಿಸುವ ಕ್ರಮಗಳು ದೀರ್ಘಕಾಲೀನವಾಗಿ ಪರಿಣಾಮಕಾರಿ ಆಗಬಹುದು.

ವಿಶ್ವ ಪ್ರಾಣಿ ದಿನ ಕೇವಲ ಆಚರಣೆಯಾಗಬಾರದು

ಅಕ್ಟೋಬರ್ 4ರಂದು ಕಾರ್ಯಕ್ರಮಗಳನ್ನು ಆಯೋಜಿಸುವುದು, ಭಾಷಣ ಮಾಡುವುದು, ಪೋಸ್ಟರ್ ಹಾಕುವುದು ಅಥವಾ ಸಾಮಾಜಿಕ ಜಾಲತಾಣಗಳಲ್ಲಿ ಸಂದೇಶ ಹಂಚಿಕೊಳ್ಳುವುದಷ್ಟೇ ವಿಶ್ವ ಪ್ರಾಣಿ ದಿನದ ಉದ್ದೇಶವಾಗಬಾರದು. ಈ ದಿನವು ನಮ್ಮ ಜೀವನಶೈಲಿಯ ಬಗ್ಗೆ ಆತ್ಮಾವಲೋಕನ ಮಾಡುವ ಅವಕಾಶವಾಗಬೇಕು.

ನಾವು ಬಳಸುವ ಪ್ಲಾಸ್ಟಿಕ್ ತ್ಯಾಜ್ಯ ಎಲ್ಲಿಗೆ ಹೋಗುತ್ತದೆ? ನಮ್ಮ ಸುತ್ತಮುತ್ತಲಿನ ಮರಗಳನ್ನು ಅನಗತ್ಯವಾಗಿ ಕಡಿದುಹಾಕುತ್ತಿದ್ದೇವೆಯೇ? ಪಕ್ಷಿಗಳಿಗೆ ನೀರು ದೊರೆಯುತ್ತಿದೆಯೇ? ಬೀದಿ ಪ್ರಾಣಿಗಳಿಗೆ ಕಿರುಕುಳ ನೀಡುತ್ತಿದ್ದೇವೆಯೇ? ಕಾಡುಪ್ರಾಣಿಗಳ ವಾಸಸ್ಥಾನಗಳ ಬಗ್ಗೆ ನಮಗೆ ಅರಿವಿದೆಯೇ? ಇಂತಹ ಪ್ರಶ್ನೆಗಳನ್ನು ಪ್ರತಿಯೊಬ್ಬರೂ ತಮ್ಮೊಳಗೆ ಕೇಳಿಕೊಳ್ಳಬೇಕು.

ನಮ್ಮಿಂದ ಸಾಧ್ಯವಾದ ಸಣ್ಣ ಪ್ರಯತ್ನಗಳು

ಪ್ರಾಣಿಗಳ ಸಂರಕ್ಷಣೆಗೆ ಪ್ರತಿಯೊಬ್ಬರೂ ದೊಡ್ಡ ಮಟ್ಟದ ಕೆಲಸ ಮಾಡಬೇಕೆಂದಿಲ್ಲ. ಸಣ್ಣ ಪ್ರಯತ್ನಗಳೂ ಮಹತ್ವದ್ದಾಗಿವೆ. ಬೇಸಿಗೆಯಲ್ಲಿ ಪಕ್ಷಿಗಳಿಗೆ ನೀರು ಇಡುವುದು, ಆಹಾರವನ್ನು ಜವಾಬ್ದಾರಿಯಿಂದ ನೀಡುವುದು, ಪ್ಲಾಸ್ಟಿಕ್ ತ್ಯಾಜ್ಯವನ್ನು ಕಡಿಮೆ ಮಾಡುವುದು, ಕಾಡುಪ್ರಾಣಿಗಳಿಗೆ ಕಿರುಕುಳ ನೀಡದಿರುವುದು, ಸಾಕುಪ್ರಾಣಿಗಳನ್ನು ಜವಾಬ್ದಾರಿಯಿಂದ ನೋಡಿಕೊಳ್ಳುವುದು ಮತ್ತು ಗಾಯಗೊಂಡ ಪ್ರಾಣಿಗಳಿಗೆ ಸೂಕ್ತ ನೆರವು ದೊರಕುವಂತೆ ಮಾಡುವುದು ಮೊದಲಾದ ಕ್ರಮಗಳನ್ನು ಕೈಗೊಳ್ಳಬಹುದು. ಅದೇ ರೀತಿ, ಮಕ್ಕಳಿಗೆ ಪ್ರಾಣಿಗಳ ಬಗ್ಗೆ ಉತ್ತಮ ಅರಿವು ಮೂಡಿಸುವುದು ಮತ್ತು ಸಮಾಜದಲ್ಲಿ ಪ್ರಾಣಿ ಕಲ್ಯಾಣದ ಕುರಿತು ಚರ್ಚೆ ನಡೆಸುವುದು ಕೂಡ ಮುಖ್ಯವಾಗಿದೆ. ಪರಿಸರದ ಬಗ್ಗೆ ಕಾಳಜಿ ಹೊಂದಿರುವ ಪ್ರತಿಯೊಬ್ಬ ನಾಗರಿಕನೂ ತನ್ನ ದಿನನಿತ್ಯದ ಜೀವನದಲ್ಲಿ ಸಣ್ಣ ಬದಲಾವಣೆಗಳನ್ನು ಮಾಡಿಕೊಂಡರೆ ಅದರ ಒಟ್ಟಾರೆ ಪರಿಣಾಮ ದೊಡ್ಡದಾಗಿರುತ್ತದೆ.

ಮಾನವೀಯತೆಯ ನಿಜವಾದ ಅರ್ಥ

ಮಾನವನಿಗೆ ಬುದ್ಧಿ, ಭಾಷೆ ಮತ್ತು ತಂತ್ರಜ್ಞಾನ ದೊರೆತಿದೆ. ಆದರೆ ಈ ಸಾಮರ್ಥ್ಯಗಳ ಜೊತೆಗೆ ಜವಾಬ್ದಾರಿಯೂ ಇದೆ. ತನ್ನಿಗಿಂತ ದುರ್ಬಲ ಜೀವಿಗಳ ಬದುಕನ್ನು ಗೌರವಿಸುವುದು ಮಾನವೀಯತೆಯ ಪ್ರಮುಖ ಲಕ್ಷಣವಾಗಿದೆ. ಪ್ರಾಣಿಗಳ ಮೇಲೆ ಕರುಣೆ ತೋರುವುದು ಕೇವಲ ಭಾವನಾತ್ಮಕ ವಿಚಾರವಲ್ಲ; ಅದು ಪರಿಸರ ಮತ್ತು ಸಮಾಜದ ಜವಾಬ್ದಾರಿಯೂ ಆಗಿದೆ.

ಪ್ರಾಣಿಗಳ ಬದುಕಿನ ಹಕ್ಕನ್ನು ಗೌರವಿಸುವ ಸಮಾಜದಲ್ಲಿ ಪರಿಸರದ ಮೇಲಿನ ಗೌರವವೂ ಹೆಚ್ಚಾಗುತ್ತದೆ. ಪರಿಸರದ ಬಗ್ಗೆ ಕಾಳಜಿ ಹೊಂದಿರುವ ಸಮಾಜ ಮುಂದಿನ ಪೀಳಿಗೆಗೆ ಆರೋಗ್ಯಕರ ಮತ್ತು ಸುರಕ್ಷಿತ ಭವಿಷ್ಯವನ್ನು ನೀಡಲು ಸಾಧ್ಯವಾಗುತ್ತದೆ.

ಕೊನೆಯ ಮಾತು

ವಿಶ್ವ ಪ್ರಾಣಿ ದಿನವು ನಮಗೆ ಒಂದು ಮಹತ್ವದ ಸಂದೇಶವನ್ನು ನೀಡುತ್ತದೆ□ಈ ಭೂಮಿ ಕೇವಲ ಮನುಷ್ಯರಿಗಾಗಿ ಅಲ್ಲ; ಅನೇಕ ಜೀವಿಗಳ ಸಹಬಾಳ್ವೆಯಿಂದಲೇ ಭೂಮಿಯ ಪರಿಸರ ವ್ಯವಸ್ಥೆ ಸಂಪೂರ್ಣವಾಗುತ್ತದೆ. ಪ್ರಾಣಿಗಳನ್ನು ರಕ್ಷಿಸುವುದು ಎಂದರೆ ಕೇವಲ ಒಂದು ಜೀವಿಯನ್ನು ಉಳಿಸುವುದಲ್ಲ. ಅದರ ಮೂಲಕ ಆಹಾರ ಸರಪಳಿ, ಜೀವವೈವಿಧ್ಯತೆ, ಅರಣ್ಯ ಮತ್ತು ಪರಿಸರ ಸಮತೋಲನವನ್ನು ಉಳಿಸುವ ಕಾರ್ಯವೂ ನಡೆಯುತ್ತದೆ.

ಇಂದು ನಾವು ಪ್ರಕೃತಿಗೆ ನೀಡುವ ಗೌರವವೇ ನಾಳೆಯ ಪೀಳಿಗೆಗೆ ದೊರೆಯುವ ಪರಿಸರದ ಗುಣಮಟ್ಟವನ್ನು ನಿರ್ಧರಿಸುತ್ತದೆ. ಆದ್ದರಿಂದ ವಿಶ್ವ ಪ್ರಾಣಿ ದಿನದಂದು ಕೇವಲ ಪ್ರಾಣಿಗಳ ಬಗ್ಗೆ ಮಾತನಾಡುವುದಕ್ಕಿಂತ ಅವುಗಳ ಬದುಕಿಗೆ ಅನುಕೂಲವಾಗುವಂತಹ ಕಾರ್ಯಗಳನ್ನು ಆರಂಭಿಸೋಣ. ಪ್ರಾಣಿಗಳಿಗೆ ಹಿಂಸೆ ನೀಡದಿರುವುದು, ಅವುಗಳ ವಾಸಸ್ಥಾನಗಳನ್ನು ರಕ್ಷಿಸುವುದು, ಪ್ರಕೃತಿಯನ್ನು ಕಾಪಾಡುವುದು ಮತ್ತು ಮಾನವ–ಪ್ರಾಣಿ ಸಹಬಾಳ್ವೆಯನ್ನು ಬೆಳೆಸುವುದು ನಮ್ಮೆಲ್ಲರ ಸಾಮೂಹಿಕ ಜವಾಬ್ದಾರಿಯಾಗಲಿ.

"ಜೀವವನ್ನು ಗೌರವಿಸಿದಾಗಲೇ ಪ್ರಕೃತಿಯನ್ನು ಗೌರವಿಸಿದಂತಾಗುತ್ತದೆ; ಪ್ರಕೃತಿಯನ್ನು ಉಳಿಸಿದಾಗಲೇ ನಮ್ಮ ಭವಿಷ್ಯವನ್ನು ಉಳಿಸಿದಂತಾಗುತ್ತದೆ."

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE